ಓಂ

ಅಥ ಶ್ರೀಮಧ್ವಾಮೃತ ಮಹಾರ್ಣವಃ

ಮೂಲ :

ಶ್ರೀಮತ್ಕವಿಕುಲತಿಲಕ ತ್ರಿವಿಕ್ರಮಪಂಡಿತಾಚಾರ್ಯರವರ ಸುಪುತ್ರರಾದ
ಶ್ರೀನಾರಾಯಣಪಂಡಿತಾಚಾರ್ಯರು

ಅನುವಾದ :

ಪಂಡಿತ ವಿದ್ವದ್ಭೂಷಣ ಅಲೆವೂರು ಸುಬ್ರಾಯಾಚಾರ್ಯರು,
ದ್ವೈತವೇದಾಂತ ಶಿರೋಮಣಿ,
ಉಡುಪಿ ಶ್ರೀಕೃಷ್ಣ ಮಂದಿರ, ಮೈಸೂರು.

ಪ್ರಕಾಶನ ಸೇವಾ:

ಕೆ. ಎಸ್. ಅಚ್ಯುತ ಬಲ್ಲಾಳ, ಮೈಸೂರು

ಪುಸ್ತಕ ಬಿಡುಗಡೆ :

ದುಂದುಭಿನಾಮ ಸಂವತ್ಸರದ ಮಕರ ಮಾಸದ ಒಂಭತ್ತನೇ ದಿನ
ಶ್ರೀ ಮಧ್ವನವಮೀ ಪುಣ್ಯದಿನ
23-1-1983

ಬೆಲೆ : ರೂ. 1-00

ಮುನ್ನುಡಿ

ಶ್ರೀ ಮಧ್ವಾಮೃತ ಮಹಾರ್ಣವವೆಂಬ ಗ್ರಂಥರತ್ನವು ಜಗದ್ಗುರುಗಳಾದ ಶ್ರೀ ಮಧ್ವಾಚಾರ್ಯರ ಪರಮಾಪ್ತ ಶಿಷ್ಯ ಕವಿಕುಲತಿಲಕ ಶ್ರೀ ಚತುರ್ದಶ ಶ್ರೀವಿಕ್ರಮಪಂಡಿತಾಚಾರ್ಯರ ವರಕುಮಾರ ಶ್ರೀ ಕವಿಕುಲತಿಲಕ ಶ್ರೀ ನಾರಾಯಣ ಪಂಡಿತಾಚಾರ್ಯರಿಂದ ವಿರಚಿತವಾಗಿದೆ.

ಈ ಶ್ರೀ ನಾರಾಯಣ ಪಂಡಿತಾಚಾರ್ಯರು 16 ಸರ್ಗಗಳುಳ್ಳ ಸರ್ವಾಲಂಕಾರಭರಿತ ಸುಮಧ್ವವಿಜಯ ಮಹಾಕಾವ್ಯವನ್ನು ರಚಿಸಿ ಸರ್ವಸಜ್ಜನರಿಗೂ ಆದಿಗುರುಗಳಾದ ಶ್ರೀ ಮಧ್ವಾಚಾರ್ಯರಲ್ಲಿ ವಿಶೇಷ ಭಕ್ತಿಯನ್ನುಂಟುಮಾಡಿ ಸದಾ ಅವಿಸ್ಮರಣೀಯ ಪರಮೋಪಕಾರಕರು ಆಗಿದ್ದಾರೆ.

ಈ ಸುಮಧ್ವವಿಜಯವು ಸಕಲಾಭೀಷ್ಟಫಲಪ್ರದಾಯಕವು ತಾರಕಮಹಾಮಂತ್ರರೂಪವೂ ಆಗಿರುತ್ತದೆ ಈ ಸುಮಧ್ವವಿಜಯವನ್ನು ಉತ್ತಮ ಗುರುಗಳ ಮುಖದಿಂದ ಸಂಪೂರ್ಣವಾಗಿ ಅರ್ಥಸಹಿತ ಪಾಠ ಕೇಳಿದರೆ, ಆದರ ಫಲರೂಪವಾಗಿ ಸರ್ವವೇದಾಂತ ಗ್ರಂಥಗಳನ್ನು ಗುರು ಮುಖದಿಂದ ಶ್ರವಣಮಾಡಿ ಶಿಷ್ಯರಿಗೆ ಸದಾ ಪ್ರವಚನ ಮಾಡುವ ಮಹಾ ಭಾಗ್ಯವನ್ನು ಹೊಂದುವನು ಎಂದು ದೊಡ್ಡವರು ಈ ಸುಮಧ್ವವಿಜಯದ ಮಹಿಮೆಯನ್ನು ವರ್ಣಿಸುತ್ತಾರೆ.

ಶ್ರೀ ಮಧ್ವಾಚಾರ್ಯರು ಸೂತ್ರಭಾಷ್ಯಾದಿ ಮಹಾಗ್ರಂಥಗಳನ್ನು ಬರೆದರೂ ಅದರಿಂದ ತೃಪ್ತಿಯನ್ನು ಹೊಂದದೆ ಸೂತ್ರ ಭಾಷ್ಯಾದಿಗಳನ್ನು ಪಠಿಸಲಕ್ಕೆ ಅಶಕ್ತರಾದವರ ಉದ್ಧಾರಕ್ಕಾಗಿ ಶ್ರೀ ಕೃಷ್ಣಾಮೃತ ಮಹಾರ್ಣವವನ್ನು ರಚಿಸಿದಂತೆ, ಶ್ರೀನಾರಾಯಣ ಪಂಡಿತಾಚಾರ್ಯರು ಶ್ರೀ ಸುಮಧ್ವವಿಜಯ ಗ್ರಂಥವನ್ನು ಓದಿ ತಿಳಿದುಕೊಳ್ಳಲು ಅಶಕ್ತರಾದ ಸಜ್ಜನರಿಗೂ ಉಪಕಾರವಾಗುವಂತೆ ಸರಳ ಸಂಸ್ಕೃತ ಶ್ಲೋಕಗಳಿಂದ ಗುರುಗಳಲ್ಲಿ ಭಕ್ತಿವೃದ್ಧಿಗೆ ಸಾಧನವಾದ ಈ ಮಧ್ವಾಮೃತ ಮಹಾರ್ಣವವನ್ನು ರಚಿಸಿದರು

ಈ ಮಧ್ವಾಮೃತ ಮಹಾರ್ಣವ ಗ್ರಂಥದ ಸರಳ ಕನ್ನಡ ಭಾಷಾನುವಾದವನ್ನು ಯಥಾವತ್ತಾಗಿ ವಿದ್ವದ್ವಿಭೂಷಣ ಆಲೆವೂರು ಸುಬ್ರಾಯಾಚಾರ್ಯರು ಮಾಡಿದ್ದು ಎಲ್ಲರಿಗೂ ಉಪಕಾರಕವಾಗಿದೆ.

ದ್ವಾಪರಯುಗದಲ್ಲಿ ಶ್ರೀ ಭೀಮಸೇನನು ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ತನ್ನ ಗದೆಯಿಂದ ದುರ್ಯೋಧನನನ್ನು ನಿಗ್ರಹಿಸಿದಂತೆ ಕಲಿಯುಗದಲ್ಲಿ ಶ್ರೀ

ಭೀಮಸೇನ ಸ್ವರೂಪರಾದ ಶ್ರೀಮಧ್ವಾಚಾರ್ಯರು ತತ್ವಜ್ಞಾನರೂಪವಾದ ಗದಾಖ್ಯ ಆಯುಧದಿಂದ ಸಜ್ಜನರ ಧರ್ಮ ಕ್ಷೇತ್ರವಾದ ಹೃದಯ ಕ್ಷೇತ್ರದಲ್ಲಿ ವಾಸವಾಗಿದ್ದ ಕಲಿಯನ್ನು ನಿಗ್ರಹಿಸಿದರು.

ಈಗ ಯಾರ ಹೃದಯದಲ್ಲಿ ಶ್ರೀ ಮಧ್ವಾಚಾರ್ಯರ ತತ್ವಜ್ಞಾನ ಗದಾಯುಧದ ಪ್ರವೇಶವಾಗಿಲ್ಲವೋ ಅವರೆಲ್ಲರ ಹೃದಯಗಳಲ್ಲಿ ಕಲಿಯು ಬಲಿಷ್ಟನಾಗಿ ಬೆಳೆಯುತ್ತಾ ಇದ್ದು ಅವನು ಅವರಲ್ಲಿ ವಿಪರೀತ ಜ್ಞಾನವನ್ನುಂಟುಮಾಡಿ ನಿಷಿದ್ಧ ಕರ್ಮಾಚರಣವನ್ನು ಮಾಡಿಸುತ್ತಾ ಇದ್ದಾನೆ.

ಇಂತಹ ವಿಷಮಕಾಲದಲ್ಲಿ ಮೈಸೂರಿನ ಓರ್ವ ಭಕ್ತರಾದ ಅಚ್ಯುತ ಬಲ್ಲಾಳರು ವಿದುರನಂತೆ ಕಲಿಯುಗದ ಕಲಿಪ್ರಾಬಲ್ಯವನ್ನು ಸಹಿಸದೆ ಕಲಿನಿಗ್ರಹಕ್ಕಾಗಿ ಶ್ರೀ ಮಧ್ವಾಮೃತ ಮಹಾರ್ಣವ ಗ್ರಂಥದ ಪ್ರಕಾಶನದಿಂದ ಶ್ರೀ ಮಧ್ವಾಚಾರ್ಯರ ತತ್ವಜ್ಞಾನಾಖ್ಯ ಗದಾಯುಧವನ್ನು ಎಲ್ಲ ಸಜ್ಜನರ ಹೃದಯಸ್ಪರ್ಶಿಯಾಗುವಂತೆ ಮಾಡಿ ಕಲಿನಿಗ್ರಹಕ್ಕಾಗಿ ಪ್ರಯತ್ನಿಸುತ್ತಿರುವುದು ಅತ್ಯಂತಾಭಿನಂದನೀಯವಾಗಿದೆ.

ಈ ಭಕ್ತರಿಂದ ಇಂತಹ ಉತ್ತಮ ಕಾರ್ಯಗಳು ಇನ್ನೂ ವಿಶೇಷ ರೂಪವಾಗಿ ನಡೆದು ಸಜ್ಜನರಿಗೆ ಪರಮೋಪಕಾರವು ಆಗಲಿ ಎಲ್ಲರೂ ಈ ಗ್ರಂಥವನ್ನು ಓದಿ ಮುಖಪಾಠ ಮಾಡಿ ನಿತ್ಯ ಪಾರಾಯಣ ಕ್ರಮವನ್ನು ಇಟ್ಟುಕೊಂಡು ಧನ್ಯರಾಗಲಿ ಎಂದು ಆಶಿಸುತ್ತೇವೆ.

ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಗಳವರು,

ಶ್ರೀ ಭಂಡಾರಕೇರಿ, ಪಲಿಮಾರು ಉಭಯಮಠಾಧೀಶರು ಉಡುಪಿ

1-1-1983

ದುಂದುಭಿ ಸಂವತ್ಸರದ ಮಾರ್ಗಶೀರ್ಷ ಬಹುಳ ೨ ಶನಿವಾರ

ಅನುವಾದಕರ ಮಾತು

ಜಗತ್ತಿನಲ್ಲಿ ಎಲ್ಲರೂ ಅನಿಷ್ಟ ನಿವೃತ್ತಿಯಾಗಬೇಕೆಂದೂ ಇಷ್ಟಪ್ರಾಪ್ತಿಯಾಗ
ಬೇಕೆಂದೂ ಬಯಸುತ್ತಾರೆ. ಅದರ ಸಾಧನಗಳನ್ನು ಮಾತ್ರ ಅರಿತಿಲ್ಲ ತ್ರೈಲೋಕ್ಯಾ
ಚಾರ್ಯರಾದ ಆನಂದತೀರ್ಥರ ಶಾಸ್ತ್ರಾಭ್ಯಾಸ ಮಾಡಿ ಅದರಲ್ಲಿದ್ದಂತೆ ಪ್ರವರ್ತಿಸು
ವುದರಿಂದಲೇ ನಮ್ಮ ನಮ್ಮ ಮನೋರಥ ಸಿದ್ಧಿಯಾಗುತ್ತದೆ ಅದನ್ನು ತಿಳಿಯದೇ
ಕಷ್ಟ ಪಡುತ್ತಾರೆ. ಶ್ರೀಮದಾನಂದತೀರ್ಥರೆಂಬ ಹೆಸರಿನ ಅರ್ಥವನ್ನು ತಿಳಿದು
ಕೊಂಡರೆ ಎಲ್ಲಾ ಸಿದ್ಧವಾಗುತ್ತದೆ ಮೋಕ್ಷಾನಂದವನ್ನುಂಟುಮಾಡುವ ಶಾಸ್ತ್ರವನ್ನು
ಬರೆದು ಉಪಕಾರ ಮಾಡಿದವರೆಂದರ್ಥ. ನಮ್ಮ ಇಷ್ಟಸಿದ್ಧಿಯಾಗಬೇಕಾದರೆ
ಆಚಾರ್ಯರ ಶಾಸ್ತ್ರವನ್ನೋದಬೇಕು. ಆಚಾರ್ಯರ ಶಾಸ್ತ್ರಕ್ಕೂ ಊರ್ಧ್ವಪುಂಡ್ರ
ಧಾರಣ ತಪ್ತಮುದ್ರಾಧಾರಣ, ಇವೇ ಮೊದಲಾದವುಗಳಿಗೆ ವಿಶೇಷ ಪ್ರಾಶಸ್ತ್ಯವನ್ನು
ವನ್ನು ಕೊಡತಕ್ಕ ಕವಿಕುಲತಿಲಕ ಶ್ರೀ ತ್ರಿವಿಕ್ರಮಪಂಡಿತಾಚಾರ್ಯರ ಸುಪುತ್ರ
ಶ್ರೀ ನಾರಾಯಣಪಂಡಿತಾಚಾರ್ಯರು ಬರೆದ **ಶ್ರೀ ಮಧ್ವಾಮೃತ ಮಹಾರ್ಣವ**ವೆಂಬ
ಅಪೂರ್ವವಾದ ಗ್ರಂಥವೊಂದಿದೆ. ಅದನ್ನು ನೋಡಿದರೆ ಎಂತಹ ನಾಸ್ತಿಕರಿಗೂ
ಆಸ್ತಿಕ್ಯ ಬುದ್ಧಿಯೂ, ಶ್ರೀ ಮಧ್ವಮತದಲ್ಲಿ ಆಸಕ್ತಿಯೂ ಉಂಟಾಗುವುದು.

ಇದನ್ನು ನಮ್ಮ ಸನ್ಮಿತ್ರರಾದ ಹಾಗೂ ಶ್ರೀಮದಾಚಾರ್ಯರ ಸಿದ್ಧಾಂತದಲ್ಲಿ ಅತ್ಯಂತ ಆಸಕ್ತಿ ಇರುವ ಶ್ರೀ ಕೆ. ಎಸ್. ಅಚ್ಯುತ ಬಲ್ಲಾಳ ಮಹಾಶಯರು ಕನ್ನಡ ಅರ್ಥಸಹಿತವಾಗಿ ಮುದ್ರಿಸಬೇಕೆಂದು ಒತ್ತಾಯ ಮಾಡಿದ್ದರಿಂದ ನನ್ನ ಅಲ್ಪ ಬುದ್ಧಿಗೆ ತೋರಿದಷ್ಟು ಅರ್ಥವನ್ನು ಪ್ರಕಾಶಪಡಿಸಿದ್ದೇನೆ. ಪಂಡಿತರು ಕ್ಷೀರನೀರ ನ್ಯಾಯದಂತೆ ದೋಷವನ್ನು ಬಿಟ್ಟು ಗುಣವನ್ನು ಸ್ವೀಕರಿಸಿ ನನ್ನನ್ನು ಕೃತಾರ್ಥನನ್ನಾಗಿಸಬೇಕಾಗಿ ಪ್ರಾರ್ಥಿಸುತ್ತೇನೆ. ಶ್ರೀ ಬಲ್ಲಾಳರಿಗೆ ಆಯುರಾರೋಗ್ಯಗಳನ್ನೂ, ಜ್ಞಾನ, ಭಕ್ತಿ, ವೈರಾಗ್ಯಗಳನ್ನೂ ಕೊಟ್ಟು ಉಡುಪಿ ಶ್ರೀಕೃಷ್ಣನು ರಕ್ಷಿಸಲಿ ಎಂದು ಪ್ರಾರ್ಥಿಸಿ ಈ ಎರಡು ಮಾತನ್ನು ಉಪಾಸ್ಯಮೂರ್ತಿಗೆ ಸಮರ್ಪಿಸುತ್ತೇನೆ.

ಶಾಂತಿಃ ಶಾಂತಿಃ ಶಾಂತಿಃ

ಶ್ರೀ ಎ. ಸುಬ್ರಾಯಾಚಾರ್ಯ,
ದ್ವೈತವೇದಾಂತ ಶಿರೋಮಣಿ,
ಮೈಸೂರು

ಓಂ

ಅರಿಕೆ

ವಿಷ್ಣೋಃ ಸರ್ವೋತ್ತಮತ್ವಂ ಚ ಸರ್ವದಾ ಪ್ರತಿಪಾದಯ ಎಂದು ಘಂಟಾ ಘೋಷವಾಗಿ ಜಗತ್ತಿಗೆ ಸಾರಿದ, ಶ್ರೀ ಜಗದ್ಗುರುಗಳಾದ ಮಧ್ವಾಚಾರ್ಯರಲ್ಲಿ ಭಕ್ತಿ ಮತ್ತು ಅವರ ಸಿದ್ಧಾಂತಗಳ ಮೇಲೆ ನಿಷ್ಠೆಯಿಂದ ಪ್ರತಿಪಾದಿತವಾಗಿ ಉಳ್ಳ ತ್ರಿವಿಕ್ರಮ ಪಂಡಿತಾಚಾರ್ಯರ ಸುಪುತ್ರರಾದ ನಾರಾಯಣಪಂಡಿತಾಚಾರ್ಯರಿಂದ ವಿರಚಿತ ವಾದ ಈ **ಮಧ್ವಾಮೃತ ಮಹಾರ್ಣವ** ಎಂಬ ಕಿರುಗ್ರಂಥವನ್ನು ಕನ್ನಡದಲ್ಲಿ ಮುದ್ರಿಸ ಬೇಕೆಂದು ಶ್ರೀ ಹರಿವಾಯುಗುರುಗಳ ಪ್ರೇರಣೆಯಾಗಿ ಆ ಪ್ರಕಾರ ಅದನ್ನು ಕನ್ನಡದಲ್ಲಿ ಅನುವಾದಿಸಿಕೊಡುವಂತೆ ಮೈಸೂರು ಶ್ರೀ ಕೃಷ್ಣಮಂದಿರದ ಪ್ರಧಾನ ಅರ್ಚಕರಾದ ಆಲೆವೂರು ಸುಬ್ರಾಯಾಚಾರ್ಯರಲ್ಲಿ ಕೇಳಿಕೊಂಡಾಗ ಅವರು ಸಂತೋಷದಿಂದ ನನ್ನ ಮೇಲೆ ಅಭಿಮಾನವಿಟ್ಟು ಬರೆದು ಕೊಟ್ಟಿದ್ದಾರೆ.

ಹಾಗೆಯೇ ಶ್ರೀ ಶ್ರೀ ಫಲಿಮಾರು ಭಂಡಾರಕೇರಿ ಉಭಯ ಮಠಾಧೀಶರಾದ ಶ್ರೀ ೧೦೮ ಶ್ರೀ ವಿದ್ಯಾಮಾನ್ಯ ತೀರ್ಥರು ನನ್ನ ಮೇಲೆ ಅನುಗ್ರಹದಿಂದ ಕೃಪೆ ಇಟ್ಟು ಮುನ್ನುಡಿಯನ್ನು ಬರೆದುಕೊಟ್ಟಿದ್ದಕ್ಕಾಗಿ ಸ್ವಾಮಿಗಳ ಚರಣಾರವಿಂದಗಳಲ್ಲಿ ಅನಂತ ಕೋಟಿ ಪ್ರಣಾಮಗಳು.

ಹಾಗೆಯೇ ಕನ್ನಡದಲ್ಲಿ ಅನುವಾದಿಸಿಕೊಟ್ಟ ಆಲೆವೂರು ಸುಬ್ರಾಯಾಚಾರ್ಯ ರಿಗೂ ಹೃತ್ಪೂರ್ವಕ ಪ್ರಣಾಮಗಳು. ಅಂತೆಯೇ ಈ ಪುಸ್ತಕವನ್ನು ಮುದ್ರಿಸಲು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸರ್ವ ವಿಧದಲ್ಲೂ ಸಹಕರಿಸಿದ ನನ್ನ ಸಹೋದರ ಕೆ. ಎಸ್. ರಾಮಕೃಷ್ಣ ಬಲ್ಲಾಳ ಮತ್ತು ಭಾವನವರಾದ ಬಿ. ಆರ್. ಸತ್ಯಮೂರ್ತಿ, (ಪಾಲುದಾರರು, ಹೋಟೆಲ್ ಶ್ರೀ ರಾಘವೇಂದ್ರ ಪ್ರಸನ್ನಃ, ಮೈಸೂರು) ಇವರಿಬ್ಬ ರಿಗೂ ಸರ್ವ ಶ್ರೇಯಸ್ಸನ್ನೂ ಶ್ರೀಹರಿವಾಯುಗುರುಸಾರ್ವಭೌಮರಲ್ಲಿ ಪ್ರಾರ್ಥಿಸು ತ್ತೇನೆ. ಹಾಗೂ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಸುಧಾ ಪ್ರಿಂಟರ್ಸ್‌ನ ಮಾಲಿಕರಾದ ಎಂ. ರಾಮರಾವ್‌ರವರಿಗೂ ನನ್ನ ಕೃತಜ್ಞತೆಯ ಅಭಿನಂದನೆಗಳು.

ಕೊನೆಯದಾಗಿ ವಾಚಕರಲ್ಲಿ ಒಂದು ಪ್ರಶ್ನೆ ಬರಬಹುದು, ಏನೆಂದರೆ ಮುದ್ರಿ ಸಲು ಎಷ್ಟೆಷ್ಟೋ ಗ್ರಂಥಗಳಿದ್ದರೂ ಅವನ್ನೆಲ್ಲಾ ಬಿಟ್ಟು ಈ ಸಣ್ಣ ಗ್ರಂಥವನ್ನು ಮುದ್ರಿ ಸಲು ಕಾರಣವೇನು? ಎಂಬುದಕ್ಕೆ ನನ್ನ ಉತ್ತರ. ಅಧ್ಯಾತ್ಮ ಜಗತ್ತಿನಲ್ಲಿ ಸೂರ್ಯ ರೆಂದರೆ ಶ್ರೀಮನ್ಮಧ್ವಾಚಾರ್ಯರು, ಇತರ ಮತಾಚಾರ್ಯರು ಸಾಮಾನ್ಯ ಬೆಳಕಿ

ನಂತೆ. ಶ್ರೀಮದಾಚಾರ್ಯರು ಇಲ್ಲದಿದ್ದರೆ ಶ್ರೀ ಹರಿಸರ್ವೋತ್ತಮತ್ವಜ್ಞಾನವೇ ಜಗತ್ತಿಗೆ ಇಲ್ಲವಾಗುತ್ತಿತ್ತು. ಇಂತಹ ಶ್ರೀಮದಾಚಾರ್ಯರ ಬಗ್ಗೆ ಕೆಲವರ ಅಭಿಪ್ರಾಯ ಕೂಡ ಹೀಗಿದೆ, ಹಿಂದಿನ ಧರ್ಮಗುರುಗಳು ಎಲ್ಲಾ ಸೆಲ ಹದಮಾಡಿಟ್ಟಿದ್ದರು, ಅದರ ಮೇಲೆ ಚಿತ್ರನೆ ಮಾಡಿದ ಹಾಗೆ ಶ್ರೀಮದಾಚಾರ್ಯರು ಮಾಡಿದರು. ಹಿಂದಿನ ಧರ್ಮಗುರುಗಳವರೆಲ್ಲಾ ಇರದಿದ್ದಲ್ಲಿ ಶ್ರೀಮದಾಚಾರ್ಯರು ಏನು ಮಾಡುತ್ತಿದ್ದರು ಎಂದು. ಇದಕ್ಕೆ ನನ್ನ ಉತ್ತರವೇನೆಂದರೆ, ಹಿರಣ್ಯಕಶಿಪು, ರಾವಣ, ಕಂಸ, ದುರ್ಯೋಧನಾದಿಗಳು ಜಗತ್ತಿಗೆ ಬಂದುದರಿಂದ ಶ್ರೀ ಮಹಾವಿಷ್ಣುವು ಅವತಾರ ಮಾಡಬೇಕಾಯಿತಷ್ಟೆ! ಹಾಗೆಯೇ ಬೌದ್ಧಾದಿಗಳಿಂದ ಹಿಡಿದು ಶ್ರೀಮದಾಚಾರ್ಯರ ವರೆಗಿನ ಎಲ್ಲಾ ಮತಧರ್ಮಗಳ ಗುರುಗಳೆಲ್ಲಾ ಮಾಡಿದ್ದ ಶ್ರೀ ಮಹಾವಿಷ್ಣುತತ್ವದ ಮೇಲಿನ ಅಪಚಾರಗಳನ್ನು ತೊಡೆದುಹಾಕಲು ಶ್ರೀಮನ್ಮಧ್ವಾಚಾರ್ಯರ ಅವತಾರ ವಾಯಿತು.

ಶ್ರೀಮದಾಚಾರ್ಯರಲ್ಲಿ ಅಪಾರ ಭಕ್ತಿ, ಅವರ ಸಿದ್ಧಾಂತದಲ್ಲಿ ದೃಢವಾದ ನಿಷ್ಠೆ, ಇವುಗಳಿಂದಾಗಿ ರಚಿತವಾದ ಈ ಮಧ್ವಾಮೃತ ಮಹಾರ್ಣವ ನನಗೆ ಅಷ್ಟೊಂದು ಹಿಡಿಸಿತು. ಅದನ್ನು ಕನ್ನಡದಲ್ಲಿ ಮುದ್ರಿಸಿ ಸಜ್ಜನತೆಯ ಮುಂದಿಡಲು ಶ್ರೀಹರಿಗುರುಗಳ ಪ್ರೇರಣೆಯಾಯಿತು. ಈ ಪುಸ್ತಕದ ಉಪಯೋಗವು ಸಜ್ಜನ ಸಮುದಾಯಕ್ಕೆ ಆದರೆ ನನ್ನ ಶ್ರಮ ಸಾರ್ಥಕ. ಈ ಪುಸ್ತಕವು ಮಧ್ವೇಶ ಕೃಷ್ಣನಿಗೆ ಅರ್ಪಿತವಾಗಲಿ.

ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತು ಮೇ ಜನ್ಮ ಜನ್ಮನಿ ||

ಇತಿ ಸಜ್ಜನ ಸೇವಕ,
ಕೆ. ಎಸ್. ಅಚ್ಯುತ ಬಲ್ಲಾಳ
ಮೈಸೂರು
ಮಾಘ ಶುದ್ಧ ನವಮಿ, ಭಾನುವಾರ
23-1-1983

|| ಶ್ರೀಃ ||

ಶ್ರೀ ಲಕ್ಷ್ಮೀನರಸಿಂಹಪ್ರಸೀದ ಶ್ರೀ ವೇದವ್ಯಾಸಾಯ ನಮಃ

ಶ್ರೀ ಗುರುಭ್ಯೋ ನಮಃ ಹರಿಃ ಓಂ

ಅಥ ಶ್ರೀ ಮಧ್ವಾಮೃತ ಮಹಾರ್ಣವಃ

ಇಂದೀವರದಲಶ್ಯಾಮಮಿಂದಿರಾ ನಂದವರ್ಧನಂ |
ವಂದೇನಂದಸುತಂ ಸಾಂದ್ರಾನಂದ ಸುಂದರ ವಿಗ್ರಹಂ ||
ತಾಪತ್ರಯೇಣ ಸಂತಪ್ತಂ ಯದೇತದಖಿಲಂ ಜಗತ್ |
ವಕ್ಷ್ಯಾಮಿಶಾಂತಯೇ ತಸ್ಯ ಮಧ್ವಾಮೃತ ಮಹಾರ್ಣವಂ ||

ನೀಲೋತ್ಪಲ ದಲದಂತೆ ನೀಲವರ್ಣ ವಿಶಿಷ್ಟನೂ. ಲಕ್ಷ್ಮಿಗೆ ಆನಂದ ವೃದ್ಧಿ ಪಡಿಸುವವನೂ, ಪೂರ್ಣಾನಂದದಿಂದ ಸುಂದರವಾದ ದೇಹವುಳ್ಳವನೂ ನಂದ ಕುಮಾರನೂ ಆದ ಶ್ರೀಕೃಷ್ಣನನ್ನು ವಂದಿಸುತ್ತೇನೆ.

ಯಾವ ಎಲ್ಲಾ ಜಗತ್ತು ಆಧ್ಯಾತ್ಮಿಕ, ಆದಿದೈವಿಕ, ಆದಿಭೌತಿಕ ಎಂಬ ತಾಪತ್ರಯದಿಂದ ಸಂತಪ್ತವಾಗಿದೆಯೋ ಆ ತಾಪತ್ರಯದ ಪರಿಹಾರಕ್ಕಾಗಿ ಶ್ರೀ ಮಧ್ವಾಮೃತ ಮಹಾರ್ಣವೆಂಬ ಗ್ರಂಥವನ್ನು ಹೇಳುತ್ತೇನೆ. (ಮಂಗಲಾಚರಣ)

ಚಂಡಾಲೋಪಿ ನ ಚಂಡಾಲ ಘಾತಕೋಪಿ ನ ಘಾತಕಃ |
ಅಚಕ್ರಧಾರೀ ಯೋ ವಿಪ್ರಃ ಸ ಚಂಡಾಲ ಉದಾಹೃತಃ || ೧ ||

ಚಂಡಾಲನೂ ಚಂಡಾಲನಲ್ಲ, ಘಾತುಕನೂ ಘಾತುಕನಲ್ಲ. ಚಕ್ರವನ್ನು ಧರಿಸದ ಯಾವ ಬ್ರಾಹ್ಮಣನಿರುವನೋ ಅವನೇ ಚಂಡಾಲನೆಂದು ಹೇಳಲ್ಪಡುವನು.

ಗುರುದ್ರೋಹೀ ನಚದ್ರೋಹೀ ಪಿತೃದ್ರೋಹೀನಚೈವಚ |
ಅತಪ್ತದೇಹವಾನ್ ವಿಪ್ರಃ ಗುರುದ್ರೋಹೀತಿ ಚೋಚ್ಯತೆ || ೨ ||

ಗುರುದ್ರೋಹಿಯು ಗುರುದ್ರೋಹಿಯಲ್ಲ, ಪಿತೃದ್ರೋಹಿ ಪಿತೃದ್ರೋಹಿಯಲ್ಲ ತಪ್ತ ಮುದ್ರಾಧಾರಣೆಯಿಲ್ಲದ ದೇಹವುಳ್ಳವನು ಗುರುದ್ರೋಹಿ ಎಂಬುದಾಗಿ ಹೇಳಲ್ಪಡುವನು.

ಸುರಾಪಾನೀ ನಪಾನೀಸ್ಯಾತ್ ಸ್ವರ್ಣಸ್ತೇಯೀ ತಥೈವಚ |
ಅಚಕ್ರಧಾರೀ ಯೋ ವಿಪ್ರಃ ಸುರಾಪಾನೀತಿ ಚೋಚ್ಯತೆ || ೩ ||

ಸುರಾಪಾನ ಮಾಡಿದವನು ಸುರಾಪಾನಿಯಲ್ಲ, ಬಂಗಾರ ಕದ್ದವನು

ಸ್ವರ್ಣಸ್ತೇಯಿಯಲ್ಲ. ಚಕ್ರ ಧಾರಣೆ ಮಾಡದ ಬ್ರಾಹ್ಮಣನು ಸುರಾಪಾನಿ ಎಂದು ಹೇಳಲ್ಪಡುತ್ತಾನೆ.

ಮಾತೃಗಾಮೀ ನ ಗಾಮೀಸ್ಯಾತ್ ಸ್ವಸೃಗಾಮೀ ನದೋಷಭಾಕ್ |
ಅಚಕ್ರಧಾರಿಯೋ ವಿಪ್ರಃ ಮಾತೃಗಾಮೀಸ ಉಚ್ಯತೇ || ೪ ||

ಮಾತೃಗಮನ ಮಾಡಿದವನು ಮಾತೃಗಾಮಿಯಲ್ಲ. ತಂಗಿಯನ್ನು ಹೆಂಡತಿಯಾಗಿಟ್ಟುಕೊಂಡವನೂ ಸ್ವಸೃಗಾಮಿಯಲ್ಲ. ಚಕ್ರಧಾರಣೆ ಮಾಡದ ಬ್ರಾಹ್ಮಣನು ಮಾತೃಗಾಮೀಯೆಂಬುದಾಗಿ ಹೇಳಲ್ಪಡುವನು.

ನಿತ್ಯಂ ಚಕ್ರಾಂಕಿತಂ ನೈವ ಶರೀರಂ ಯಸ್ಯ ದೇಹಿನಃ |
ವಿಷ್ಟಾಕೃಮಿಸಮಂ ಜ್ಞೇಯಂ ಶರೀರಂ ತಸ್ಯ ವೈಧೃವಂ || ೫ ||

ಯಾವ ಮನುಷ್ಯನ ಶರೀರವು ಯಾವಾಗಲೂ ಚಕ್ರಾಂಕಿತವಾಗಿರುವುದಿಲ್ಲವೋ ಅವನ ಶರೀರವು ನಿಶ್ಚಯವಾಗಿಯೂ ಮಲದ ಕ್ರಿಮಿಗೆ ಸದೃಶವಾದದ್ದು ಎಂದು ತಿಳಿಯಬೇಕು

ವಿನಾ ಯಜ್ಞೋಪವೀತೇನ ವಿನಾ ಚಕ್ರಸ್ಯ ಧಾರಣಾತ್ |
ವರಂ ಹತ್ಯಾ ಸುರಾಪಾನಂ ಭಸ್ಮನಸ್ತ್ರು ವಿಧಾರಣಾತ್ || ೬ ||

ಯಜ್ಞೋಪವೀತವಿಲ್ಲದೆ ಚಕ್ರಮುದ್ರೆಯನ್ನು ಧಾರಣೆ ಮಾಡದೆ ಭಸ್ಮವನ್ನು ಧಾರಣೆ ಮಾಡುವುದಕ್ಕಿಂತ ಬ್ರಹ್ಮಹತ್ಯಾ, ಸುರಾಪಾನ ಮಾಡುವುದು ಒಳ್ಳೆಯದು. (ಬ್ರಹ್ಮಹತ್ಯಾ ಸುರಾಪಾನ ಮಾಡಬಹುದೆಂದು ಅರ್ಥವಲ್ಲ, ಅದಕ್ಕಿಂತಲೂ ಭಸ್ಮ ಧಾರಣ ಮಾಡುವುದು ಪಾಪವೆಂದರ್ಥ.)

ಅಚಕ್ರಧಾರೀ ಯೋ ವಿಪ್ರ! ಮಧ್ವಶಾಸ್ತ್ರಂ ನವಿಂದತಿ |
ಅವಲೋಕ್ಯಮುಖಂ ತಸ್ಯ ಸಚೈಲ ಸ್ನಾನಮಾಚರೇತ್ || ೭ ||

ಯಾವ ಬ್ರಾಹ್ಮಣನು ಚಕ್ರ ಮುದ್ರೆಯನ್ನು ಧಾರಣೆ ಮಾಡದೆ ಮಧ್ವ ಶಾಸ್ತ್ರವನ್ನು ತಿಳಿಯದಿರುತ್ತಾನೋ ಅವನ ಮುಖವನ್ನು ನೋಡಿದರೆ ಸಚೈಲಸ್ನಾನ ಮಾಡಬೇಕು. (ಯಾವ ವಸ್ತ್ರಗಳನ್ನು ಧರಿಸಿಕೊಂಡು ನೋಡುತ್ತೇವೋ ಆ ವಸ್ತ್ರ ಸಹಿತವಾಗಿಯೇ ಸ್ನಾನ ಮಾಡುವುದಕ್ಕೆ ಸಚೈಲಸ್ನಾನವೆಂದು ಹೆಸರು.)

ತಸ್ಯಕಂಠೇ ಶಿಲಾಂಬಧ್ವಾ ಸಿಂಧುಮಧ್ಯೇ ವಿನಿಕ್ಷಿಪೇತ್ |
ಕದಾಪ್ಯತಪ್ತದೇಹಸ್ತು ಮಧ್ವಶಾಸ್ತ್ರಂ ವಿದೂಷ್ಯತಿ || ೮ ||

ಒಂದು ಸಲವೂ ತಪ್ತಮುದ್ರಾಧಾರಣೆ ಮಾಡದೆ ಮಧ್ವಶಾಸ್ತ್ರವನ್ನು

ದೂಷಿಸುವವನ ಕಂಠದಲ್ಲಿ ಶಿಲೆಯನ್ನು ಕಟ್ಟಿ ಅವನನ್ನು ಸಮುದ್ರ ಮಧ್ಯದಲ್ಲಿ ಹಾಕಬೇಕು.

ಸಂಸಾರೇ ಕ್ಲಿಶ್ಯಮಾನಸ್ತು ತಮೋ ವಿಶತಿ ಸ ಧ್ರುವಂ |
ಮಧ್ವಸ್ಯ ಲಾಂಛನಂ ಹಿತ್ವಾ ಮಾಯಿಶಾಸ್ತ್ರಂ ಭಜೇದ್ಯದಿ || ೯ ||

ಶ್ರೀ ಮಧ್ವಾಚಾರ್ಯರ ಲಾಂಛನವನ್ನು ಬಿಟ್ಟು ಮಾಯಾವಾದ ಶಾಸ್ತ್ರವನ್ನು ಸೇವಿಸಿದರೆ ಸಂಸಾರದಲ್ಲಿ ಕಷ್ಟಪಟ್ಟು ನಿಶ್ಚಯವಾಗಿಯೂ ಅಂಧತಮಸ್ಸಿನಲ್ಲಿ ಪ್ರವೇಶಿಸುತ್ತಾನೆ.

ದುಃಖಾತ್ಮಕಂ ತಮೋಘೋರಂ ಭವತ್ಯೇವ ನ ಸಂಶಯಃ |
ದೂಷಯಿತ್ವಾ ಮಯಿಶಾಸ್ತ್ರಂ ಮಧ್ವಶಾಸ್ತ್ರಂ ಭಜೇದ್ಯದಿ ||
ಮುಕ್ತಿಃ ಕರತಲೇ ತಸ್ಯ ನಾತ್ರಕಾರ್ಯಾವಿಚಾರಣಾ || ೧೦ ||

ಮಾಯಾವಾದಿ ಶಾಸ್ತ್ರವನ್ನು ಸೇವಿಸಿದರೆ ದುಃಖಾತ್ಮಕವಾದ ಅಂಧಃ-ತಮಸ್ಸು ಆಗಿಯೇ ಆಗುತ್ತದೆ. ಸಂದೇಹವೇ ಇಲ್ಲ. ಅಂಧ.ತಮಸ್ಸು ಭಯಂಕರವಾದುದು. ಮಾಯಾವಾದಿ ಶಾಸ್ತ್ರವನ್ನು ದೂಷಿಸಿ ಶ್ರೀ ಮಧ್ವಶಾಸ್ತ್ರವನ್ನು ಭಜಿಸಿದರೆ ಅವನ ಅಂಗೈಯಲ್ಲಿಯೇ ಮೋಕ್ಷ. ವಿಚಾರವೇ ಮಾಡಬೇಕಾದ್ದಿಲ್ಲ.

ಯೋ ಮಧ್ವಶಾಸ್ತ್ರಂ ಸಮುಪೇಕ್ಷ್ಯ ದುಷ್ಟೋ ಜೀವಸ್ಯ ಚೇಶಸ್ಯ ಚ ಸಾಮ್ಯಮೇವ |
ಮುಕ್ತೌ ವದೇತ್ ಶಾಸ್ತ್ರಮಧರ್ಮಜುಷ್ಯಂ ಜ್ಞಾತ್ವಾತು ಭಾವಂ ಪ್ರವಿಶೇತ್ತ್ರ-
ಮೋಂಧಂ || ೧೧ ||

ಯಾವ ದುಷ್ಟನು ಶ್ರೀ ಮಧ್ವಶಾಸ್ತ್ರವನ್ನು ಉಪೇಕ್ಷಿಸಿ ಜೀವನಿಗೂ ಈಶ್ವರನಿಗೂ ಮೋಕ್ಷದಲ್ಲಿ ಸಾಮ್ಯವನ್ನು ಹೇಳುತ್ತಾನೋ ಅಧರ್ಮದಿಂದ ಯುಕ್ತವಾದ ಶಾಸ್ತ್ರದ ಭಾವವನ್ನು, ಯಾರು ತಿಳಿದುಕೊಳ್ಳುತ್ತಾನೋ ಅವನೂ ಅಂಧಃತಮಸ್ಸಿಗೆ ಪ್ರವೇಶಿಸುತ್ತಾನೆ.

ವಾಸುದೇವಸ್ಯ ಜೀವಸ್ಯ ಸಾಮ್ಯಮಿತ್ಯಕ್ಷರದ್ವಯಂ |
ಮುಕ್ತೌ ವದತ್ ಸುಚಂಡಾಲೋ ಬ್ರಹ್ಮಹಾ ಸಭವೇದ್ಧ್ರುವಂ || ೧೨ ||

ಶ್ರೀ ಭಗವಂತನಿಗೂ ಜೀವನಿಗೂ "ಸಾಮ್ಯ" ಎಂಬ ಎರಡು ಅಕ್ಷರವನ್ನು ಮೋಕ್ಷದಲ್ಲಿ ಹೇಳುವವನು ಅವನೇ ನಿಶ್ಚಯವಾಗಿಯೂ ಸರಿಯಾದ ಅಂತ್ಯಜ. ಅವನೇ ಬ್ರಹ್ಮಹತ್ಯಾ ಮಾಡಿದವನು.

ಮೋಹಾತ್ ಕಾಮಾತ್ ಅಶಾಸ್ತ್ರಾಚ್ಚ ಮುಕ್ತಾ ಸಾಮ್ಯಂಬ್ರುವನ್ ಜನ |
ವಾಸುದೇವಸ್ಯ ಜೀವಸ್ಯ ಮೃತೋ ನಿರಯಮಾಪ್ನುಯಾತ್ || ೧೩ ||

ಮೋಹದಿಂದಲೋ ಕಾಮದಿಂದಲೋ ಶಾಸ್ತ್ರವಿರುದ್ಧವಾಗಿಯೋ ಮೋಕ್ಷದಲ್ಲಿ ಈಶ್ವರನಿಗೂ ಜೀವನಿಗೂ ಸಾಮ್ಯವನ್ನು ಹೇಳುವ ಜನರು ಮರಣಾನಂತರ ನರಕವನ್ನು ಹೊಂದುವರು.

ಬ್ರಹ್ಮಕಾರ್ಯಂ ಜಗದಿದಂ ಬ್ರುವನ್ ಅಜ್ಞ! ಸಸಂಶಯಃ |
ಮರಣಂ ಪ್ರಾಪ್ಯ ಮೂಢಾತ್ಮಾ ತಮೋ ವಿಶತಿ ಶಾಶ್ವತಂ || ೧೪ ||

ಈ ಜಗತ್ತು ಬ್ರಹ್ಮನ ಪರಿಣಾಮವೆಂದು ಹೇಳುವ ಮೂಢನು ಸಂಶಯಗ್ರಸ್ತನಾಗಿದ್ದು ಮರಣವನ್ನು ಹೊಂದಿದ ಮೇಲೆ ಆ ಮೂಢಾತ್ಮನು ಶಾಶ್ವತವಾದ ಅಂಧತಮಸ್ಸುವೆಂಬ ನರಕವನ್ನು ಪ್ರವೇಶಿಸುತ್ತಾನೆ.

ಶೈವಾನ್ ರಾಮಾನುಜೀಯಾಂಶ್ಚ ತಾರ್ಕಿಕಾನಂತ್ಯಜಾಂಸ್ತತಃ |
ಸ್ಮೃತ್ವಾ ಸ್ನಾನಂ ಪ್ರಕುರ್ವೀತ ಗಾಯತ್ರ್ಯಷ್ಟಶತಂ ಜಪೇತ್ || ೧೫ ||

ಶೈವರುಗಳನ್ನೂ ರಾಮಾನುಜೀಯ ಮತದವರನ್ನೂ, ತಾರ್ಕಿಕರನ್ನೂ ಹಾಗೆ ಅಂತ್ಯಜರನ್ನೂ ನೆನೆಸಿಕೊಂಡರೆ ಸ್ನಾನ ಮಾಡಿ ೧೦೮ ಗಾಯತ್ರಿಯನ್ನು ಮಾಡಬೇಕು.

ಸಬ್ರಹ್ಮಹಾ ಸಗೋಘ್ನಶ್ಚ ಸ್ತೇಯೀ ಸ ಗುರುತಲ್ಪಗಃ |
ಮುಕ್ತೌ ಸಾಮ್ಯಂ ಬ್ರುವಾಣೋ ಹಿ ಜೀವಸರ್ವೇಶಯೋರಪಿ || ೧೬ ||

ಮೋಕ್ಷದಲ್ಲಿ ಜೀವನಿಗೂ ಶ್ರೀ ಭಗವಂತನಿಗೂ ಸಾಮ್ಯವನ್ನು ಹೇಳುವವನು ಬ್ರಹ್ಮಹತ್ಯಾ ಮಾಡಿದವನು, ಗೋಹತ್ಯಾ ಮಾಡಿದವನು, ತಸ್ಕರನು ಗುರುಭಾರ್ಯಾಗಮನ ಮಾಡಿದವನು.

ವರಂ ಸ್ವಮಾತೃಗಮನಂ ವರಂ ಗೋಮಾಂಸ ಭಕ್ಷಣಂ |
ವರಂ ಹತ್ಯಾ ಸುರಾಪಾನಂ ಮುಕ್ತೌ ಸಾಮ್ಯಂ ಚ ಚೋದನಾತ್ || ೧೭ ||

ಸಾಮ್ಯವನ್ನು ಹೇಳುವುದಕ್ಕಿಂತ ತಾಯಿ ಸಂಗ ಮಾಡುವುದು ಒಳ್ಳೆಯದು. ಗೋಮಾಂಸ ಭಕ್ಷಣ ಮಾಡುವುದು ಒಳ್ಳೆಯದು. ಹಿಂಸಾ ಮಾಡುವುದು, ಸುರಾಪಾನ ಮಾಡುವುದು ಒಳ್ಳೆಯದು. (ಮಾತೃಸಂಗ ಮಾಡಬೇಕೆಂದು ಅರ್ಥವಲ್ಲ, ಗೋಮಾಂಸ ಭಕ್ಷಣಾದಿಗಳಿಗಿಂತಲೂ ಮುಕ್ತನಿಗೆ ಬ್ರಹ್ಮಸಾಮ್ಯ ಹೇಳುವುದು ಅತಿ ಪಾಪವೆಂದು ಅರ್ಥ.)

ಮುಕ್ತಾವಪಿ ಚ ಸಂಸಾರೇ ನ ಸಾಮ್ಯಂ ಬ್ರಹ್ಮಜೀವಯೋಃ |
ಸಂಪೂರ್ಣಾನಂದವಾನ್ ವಿಷ್ಣುಃ ಪರಿಪೂರ್ಣಾನಂದವಾನ್ನರಃ || ೧೮ ||

ವಿಷ್ಣುವು ಸಂಪೂರ್ಣಾನಂದವುಳ್ಳವನು, ಜೀವನೂ ಸಂಪೂರ್ಣಾನಂದವುಳ್ಳವ

ನೆಂದು ಪರಬ್ರಹ್ಮನಿಗೂ ಜೀವನಿಗೂ ಮುಕ್ತಿಯಲ್ಲಿಯೂ ಸಂಸಾರದಲ್ಲಿಯೂ ಸಾಮ್ಯ ಹೇಳುವುದು ಸರಿಯಲ್ಲ.

ಯದಾ ಸಂಜಾಯತೇ ಸಂಗೋ ಜಾಯಯಾ ಮಾಯಿನಾಂ ಸಚ |
ಮಾತ್ರಾಸಮಸ್ತು ವಿಜ್ಞೇಯೋ ಹ್ಯಭಿನ್ನತ್ವಂ ಯತಸ್ತಯೋಃ || ೧೯ ||

ಮಾಯಾವಾದ ಮತದಲ್ಲಿ ತಾಯಿಯೂ ಹೆಂಡತಿಯೂ ಅಭಿನ್ನರಾದುದರಿಂದ ಯಾವಾಗ ಹೆಂಡತಿಯಿಂದ ಸಂಗವುಂಟಾಗುತ್ತದೋ ಅದು ತಾಯಿಯ ಸಂಗಕ್ಕೆ ಸಮ ವೆಂದು ತಿಳಿದುಕೊಳ್ಳಬೇಕು.

ಮಧ್ವಶಾಸ್ತ್ರಂ ದೂಷಯಿತ್ವಾ ಸಾಮ್ಯಶಾಸ್ತ್ರಂ ಭಜೇದ್ಯದಿ |
ದುಃಖಾತ್ಮಕಂ ತಮಸ್ತಸ್ಯ ಭವತ್ಯೇವ ನ ಸಂಶಯಃ || ೨೦ ||

ಮಧ್ವಶಾಸ್ತ್ರವನ್ನು ದೂಷಿಸಿ ಸಾಮ್ಯ ಶಾಸ್ತ್ರವನ್ನು ಸೇವಿಸಿದರೆ ಅವನಿಗೆ ದುಃಖಸ್ವರೂಪವಾದ ಅಂಧಂತಮಸ್ಸು ಉಂಟಾಗಿಯೇ ಆಗುವುದು ಸಂದೇಹವಿಲ್ಲ.

ಯನ್ಮಾಯೀ ಕ್ಷುನ್ನಿವೃತ್ಯರ್ಥಂ ಅನ್ನಂ ಭುಂಕ್ತೇ ಚ ಶ್ವಾನವತ್ |
ವಿಷ್ಠಾಭುಕ್ತಿಶ್ಚ ತಜ್ಜ್ಞೇಯಂ ಹ್ಯಭಿನ್ನತ್ವಂ ಯತಸ್ತಯೋ || ೨೧ ||

ಮಾಯಾವಾದಿ ಮತದಲ್ಲಿ ಅನ್ನಕ್ಕೂ ಮಲಕ್ಕೂ ಭೇದವಿಲ್ಲದಿರುವುದರಿಂದ ಮಾಯಾವಾದೀ ಹಸಿವೆ ನಿವೃತ್ತಿಗೆ ಅನ್ನ ಊಟ ಮಾಡಿದರೆ ನಾಯಿಯಂತೆ ಮಲ ಭೋಜನಕ್ಕೆ ಸಮವೆಂದು ತಿಳಿದುಕೊಳ್ಳಬೇಕು.

ಸ್ವಗ್ರಾಮ ಗಮನೇ ಮಾಯೀ ಹ್ಯಶ್ವಮಾರುಹ್ಯಗಚ್ಛತಿ |
ಶ್ವಾನಾರೂಢಸ್ಸವಿಜ್ಞೇಯಃ ಹ್ಯಭಿನ್ನತ್ವಂ ಯತಸ್ತಯೋಃ || ೨೨ ||

ಮಾಯಾವಾದೀ ತನ್ನ ಗ್ರಾಮಕ್ಕೆ ಹೋಗಲಿಕ್ಕೆ ಕುದುರೆಯ ಮೇಲೆ ಕುಳಿತು ಕೊಂಡು ಹೋದರೆ ನಾಯಿಯ ಮೇಲೆ ಕುಳಿತುಕೊಂಡು ಹೋದನೆಂದು ತಿಳಿದುಕೊಳ್ಳ ಬೇಕು. ಕುದುರೆಗೂ ನಾಯಿಗೂ ಅವನ ಮತದಲ್ಲಿ ಅಭೇದವಷ್ಟೆ !

ಯೇನ ಬ್ರಾಹ್ಮಣ್ಯ ಸಿದ್ಧ್ಯರ್ಥಂ ಉಪವೀತಂತು ಧಾರ್ಯತೇ |
ಚರ್ಮಧಾರೀ ಸವಿಜ್ಞೇಯ ಹ್ಯಭಿನ್ನತ್ವಂ ಯತಸ್ತಯೋ || ೨೩ ||

ಯಾರಿಂದ ಬ್ರಾಹ್ಮಣ ಸಿದ್ಧಿಯಾಗುವುದಕ್ಕಾಗಿ ಯಜ್ಞೋಪವೀತ ಧರಿ ಸಲ್ಪಡುತ್ತದೋ ಅವನು ಚರ್ಮಧಾರಿಯೆಂದು ತಿಳಿದುಕೊಳ್ಳಬೇಕು. ಯಜ್ಞೋಪ ವೀತವೂ ಚರ್ಮವೂ ಅವನ ಮತದಲ್ಲಿ ಒಂದೆಯಷ್ಟೆ !

ವಾಸುದೇವಂ ಪರಿತ್ಯಜ್ಯ ಯೋನ್ಯಂ ಗುರುಮುಪಾಸತೇ ||

ತೃಷಿತೋ ಜಾನ್ಹವೀತೀರೇ ಕೂಪಂ ಖನತಿ ದುರ್ಮತಿಃ || ೨೪ ||

ಶ್ರೀಮನ್ನಾರಾಯಣ ದೇವರನ್ನು ಬಿಟ್ಟು ಬೇರೆ ದೇವರನ್ನು ಸರ್ವೋತ್ತಮನೆಂದು ಉಪಾಸನೆ ಮಾಡುತ್ತಾರೋ ? ನೀರಕೆಡಿಯಾದ ದುರ್ಬುದ್ಧಿ ಗಂಗಾ ನದೀ ತೀರದಲ್ಲಿ ಬಾವಿಯನ್ನು ತೋಡುತ್ತಾನೆ. (ಗಂಗಾನದಿಯ ಪವಿತ್ರವಾದ ನೀರನ್ನು ಬಿಟ್ಟು ಬಾವಿಯನ್ನು ತೋಡಿ ನೀರನ್ನು ತೆಗೆದು ನೀರು ಕುಡಿಯುವುದು ಎಷ್ಟು ಕಷ್ಟವೋ ಸರ್ವೋತ್ತಮನಾದ ಶ್ರೀ ನಾರಾಯಣ ದೇವರನ್ನು ಬಿಟ್ಟು ಸರ್ವೋತ್ತಮರಲ್ಲದ ಬೇರೆ ದೇವತೆಗಳನ್ನು ಉಪಾಸನೆ ಮಾಡುವುದರಿಂದ ತುಂಬಾ ಕಷ್ಟವುಟಾಗುವುದು.)

ಸ್ವಮಾತರಂ ಪರಿತ್ಯಜ್ಯ ಶ್ವಪಾಕೀಂ ವಂದತೇಯಥಾ ||
ತಥಾ ವಾಯುಂ ಪರಿತ್ಯಜ್ಯ ಯೋನ್ಯಂಗುರು ಮುಪಾಸತೇ || ೨೫ ||

ತನ್ನ ತಾಯಿಯನ್ನು ಬಿಟ್ಟು ನಾಯಿಯನ್ನು ಬೇಯಿಸಿ ತಿನ್ನುವ ಚಂಡಾಲ ಸ್ತ್ರೀಯನ್ನು ವಂದನೆ ಮಾಡಿದರೆ ಹೇಗೋ ವಾಯು ದೇವರನ್ನು ಬಿಟ್ಟು ಅನ್ಯ ಗುರುವನ್ನುಪಾಸನೆ ಮಾಡುವವನು ಅದಕ್ಕೆ ಸಮಾನ

ಮಧ್ವಂ ಗುರುಂ ಪರಿತ್ಯಜ್ಯ ವಿಷ್ವಕ್ಸೇನಂ ಭಜೇದ್ಯದಿ |
ಸಜೀವನ್ನೇವ ಚಂಡಾಲೋ ಮೃತೋತಿತಮ ಆಪ್ನುಯಾತ್ || ೨೬ ||

ಶ್ರೀ ಮಧ್ವಾಚಾರ್ಯ ಗುರುವನ್ನು ಪರಿತ್ಯಜಿಸಿ ವಾಯು ಪುತ್ರನಾದ ವಿಷ್ವಕ್ಸೇನನನ್ನು ಸೇವಿಸಿದರೆ ಅವನು ಬದುಕಿರುವಾಗಲೇ ಚಂಡಾಲನಾಗಿ ಸತ್ತ ಮೇಲೆ ಅಂಧಂತಮಸ್ಸಿಗೆ ಸೇರುವನು.

ಪಕ್ಷಿಣೇ ನಿತ್ಯಮುಕ್ತತ್ವಂ ಕಲ್ಪಯಿತ್ವಾ ತು ದುರ್ಮನಾಃ ||
ತಂ ಗುರುಂ ಭಜತೇಯಸ್ತು ತನೋವಿಶತಿ ಸಧ್ರುವಂ || ೨೭ ||

ಪಕ್ಷಿಯಾದ ಗರುಡನಿಗೆ ನಿತ್ಯ ಮುಕ್ತತ್ವವನ್ನು (ಸಂಸಾರಾಭಾವವನ್ನು) ಕಲ್ಪಿಸಿಯೋ ದುರ್ಮತಿಯಾದವನು ಅವನನ್ನೇ ಗುರುವನ್ನಾಗಿ ಭಜಿಸುತ್ತಾನೋ ಅವನು ನಿಶ್ಚಯವಾಗಿ ಅಂಧಂತಮಸ್ಸನ್ನು ಪ್ರವೇಶಿಸುತ್ತಾನೆ.

ಮಧ್ವಸ್ಯ ದ್ವೇಷಿಣಂದೃಷ್ಟ್ವಾ ಸಚೈಲಂ ಸ್ನಾನಮಾಚರೇತ್ |
ಅನ್ಯಥಾ ತಮ ಆಪ್ನೋತಿ ಯಸ್ಮಾನ್ನೈವೋತ್ಥಿತಿಃ ಕ್ವಚಿತ್ || ೨೮ ||

ಶ್ರೀ ಮಧ್ವಾಚಾರ್ಯರ ದ್ವೇಷಿಯನ್ನು ನೋಡಿ ಸಚೈಲ ಸ್ನಾನ ಮಾಡಬೇಕು. (ಸಚೈಲ ಸ್ನಾನವೆಂದರೆ ನೋಡುವಾಗ ಯಾವ ವಸ್ತ್ರವನ್ನು ಧರಿಸಿರುತ್ತೇವೋ ಆ ವಸ್ತ್ರ ಸಹಿತವಾಗಿಯೇ ಸ್ನಾನ ಮಾಡುವುದು.) ಇಲ್ಲವಾದರೆ ಅಂಧಂತಮಸ್ಸು ಬರುವುದು. ಅದರಿಂದ ಮೇಲಕ್ಕೆ ಎದ್ದು ಬರುವುದೇ ಇಲ್ಲ.

ನಿತ್ಯಕರ್ಮರತಃ ನಿತ್ಯಂ ನಿತ್ಯಂ ವೈ ದೇವ ಪೂಜಕಃ |
ಮಧ್ವಶಾಸ್ತ್ರಂ ದೂಷಯನ್ ಸ ಚಂಡಾಲತ್ವ ಮವಾಪ್ನುಯಾತ್ || ೨೯ ||

ಯಾವಾಗಲೂ ನಿತ್ಯಕರ್ಮದಲ್ಲಿ ಆಸಕ್ತನಾಗಿದ್ದು ನಿತ್ಯದಲ್ಲಿ ದೇವರನ್ನು ಪೂಜಿಸಿ ಮಧ್ವಶಾಸ್ತ್ರವನ್ನು ದೂಷಿಸುವವನು ಚಂಡಾಲತ್ವವನ್ನು ಹೊಂದುವನು.

ಮಧ್ವ ಶಾಸ್ತ್ರಂತು ಯೋ ವಿಪ್ರೋ ನ ಪಠೇನ್ನಸ್ಮರೇದ್ಯಪಿ ||
ಕಂಠೇಬಧ್ವಾ ಶಿಲಾಂ ಗುರ್ವೀಂ ವಿಷ್ಟಾಕೂಪೆ ವಿನಿಕ್ಷಿಪೇತ್ || ೩೦ ||

ಮಧ್ವ ಶಾಸ್ತ್ರವನ್ನು ಪಠಿಸದಿದ್ದರೆ ಸ್ಮರಿಸದೆಯೂ ಇದ್ದರೆ ಅವನನ್ನು ಕಂಠದಲ್ಲಿ ಭಾರವಾದ ಶಿಲೆಯನ್ನು ಕಟ್ಟಿ ಮಲದ ಬಾವಿಯಲ್ಲಿಡಬೇಕು.

ಚಂಡಾಲೋಪಿ ನ ಚಂಡಾಲ ಗುರುದ್ರೋಹೀ ನ ದೋಷಭಾಕ್ |
ಮಧ್ವಶಾಸ್ತ್ರಸ್ಯ ಸಂತ್ಯಾಗಾತ್ ಸತು ಚಂಡಾಲ ಉಚ್ಯತೇ || ೩೧ ||

ಚಂಡಾಲನೂ ಚಂಡಾಲನಲ್ಲ. ಗುರುದ್ರೋಹಿಗೂ ದೋಷವಿಲ್ಲ. ಮಧ್ವ ಶಾಸ್ತ್ರವನ್ನು ಬಿಡೋಣದರಿಂದ ಚಂಡಾಲನೆಂದು ಹೇಳಲ್ಪಡುತ್ತಾನೆ.

ಸಹಸ್ರಶಾಖಾಧ್ಯಾಯೀ ಚ ಸರ್ವ ಯಜ್ಞೇಷು ದೀಕ್ಷಿತಃ ||
ವಿಷ್ಣುಭಕ್ತೋಪಿ ಮೂಢಾತ್ಮಾ ನ ವಂದ್ಯೋ ಮಧ್ವದೂಷಕಃ || ೩೨ ||

ಸಾವಿರಾರು ವೇದ ಶಾಖೆಗಳನ್ನು ಓದಿದವನೂ, ಸರ್ವಯಜ್ಞಗಳಲ್ಲಿ ದೀಕ್ಷಿನಾದವನೂ ವಿಷ್ಣುಭಕ್ತನೂ ಆದ ಮೂಢನು ಶ್ರೀ ಮಧ್ವಾಚಾರ್ಯರನ್ನು ದೂಷಿಸತಕ್ಕವನೆಂದರೆ ವಂದ್ಯನಾವುದಿಲ್ಲ.

ಮಧ್ವಶಾಸ್ತ್ರ ಮುಪೇಕ್ಷ್ಯಾ ಥ ವೇದಮೇವ ಪಠೇದ್ಧಿಯಃ ||
ಜೀವನ್ನೇವ ಸ ಚಂಡಾಲೋ ಮೃತೋ ನಿರಯ ಮಾಪ್ನುಯಾತ್ || ೩೩ ||

ಯಾರು ಮಧ್ವಶಾಸ್ತ್ರವನ್ನು ಉಪೇಕ್ಷಿಸಿ ವೇದ ಮಾತ್ರ ಓದುತ್ತಾನೊ ಅವನು ಜೀವಚ್ಚಂಡಾಲನಾಗಿದ್ದು ಮೃತನಾದಮೇಲೆ ನರಕವನ್ನು ಹೊಂದುತ್ತಾನೆ.

ಶ್ರೀ ಮಧ್ವಶಾಸ್ತ್ರ ಚಕ್ರಾದಿರಹಿತೋ ಬ್ರಾಹ್ಮಣಾಧಮಃ ||
ಪ್ರಚ್ಯುತಃ ಸರ್ವಧರ್ಮೇಷು ನಿರಯಂ ಗಚ್ಛತಿ ಧ್ರುವಂ || ೩೪ ||

ಶ್ರೀ ಮಧ್ವಶಾಸ್ತ್ರ ಮತ್ತು ಚಕ್ರಶಂಖಾದಿ ಮುದ್ರಾದಿರಹಿತನಾದ ಅಧಮ ಬ್ರಾಹ್ಮಣನು ಸರ್ವ ಧರ್ಮಗಳಲ್ಲಿ ಭ್ರಷ್ಟನಾಗಿ ನಿಶ್ಚಯವಾಗಿಯೂ ನರಕಕ್ಕೆ ಹೋಗುತ್ತಾನೆ.

ಮಧ್ವಶಾಸ್ತ್ರೋರ್ಧ್ವಪುಂಡ್ರಾದಿಚಿಹ್ನೋ ಪ್ರಿಯತಮೋ ಹರೇಃ ||

ಪ್ರಚ್ಯುತಃ ಸರ್ವಧರ್ಮೇಭ್ಯೋ ರಿಕ್ತೋ ನರಕಮಾಪ್ನುಯಾತ್ ॥ ೩೫ ॥

ಶ್ರೀಹರಿಗೆ ಅತ್ಯಂತ ಪ್ರಿಯವಾದ ಶ್ರೀ ಮಧ್ವಶಾಸ್ತ್ರ, ಊರ್ಧ್ವಪುಂಡ್ರಾದಿ ಚಿಹ್ನವಲ್ಲಿ ಭ್ರಷ್ಟನಾಗಿ ಸಕಲಧರ್ಮಗಳಿಂದ ಶೂನ್ಯನಾಗಿದ್ದವನು ನರಕವನ್ನು ಹೊಂದುವನು.

ಅಶ್ರುತ್ವಾ ಮಧ್ವಶಾಸ್ತ್ರಂ ತು ಯದಿಕರ್ಮ ಸಮಾಚರೇತ್ ।
ನಿಷ್ಫಲಂ ತು ಭವೇತ್ಸರ್ವಂ ಇಷ್ಟಾಪೂರ್ತಿಂ ದ್ವಿಜೋತ್ತಮಃ ॥ ೩೬ ॥

ಶ್ರೀ ಮಧ್ವಶಾಸ್ತ್ರವನ್ನು ಶ್ರವಣ ಮಾಡದೆ ಸತ್ಕರ್ಮವನ್ನು ಅನುಷ್ಠಾನ ಮಾಡಿದರೆ ಆ ಉತ್ತಮನಾದ ಬ್ರಾಹ್ಮಣನು ಮಾಡಿದ ಎಲ್ಲಾ ಯಾಗಗಳು, ದೇವಾಲಯ ನಿರ್ಮಾಣ ಇತ್ಯಾದಿ ಪುಣ್ಯ ಕರ್ಮಗಳು ಫಲರಹಿತಗಳಾಗುವುವು.

ಉಪವೀತಂ ಶಿಖಾಬಂಧಂ ಊರ್ಧ್ವಪುಂಡ್ರಂ ಸುಶೋಭನಂ ॥
ಮಧ್ವನಾಮವಿಹೀನಸ್ಯ ವಿಪ್ರಸ್ಯ ವಿಫಲಂ ಭವೇತ್ ॥ ೩೭ ॥

ಯಜ್ಞೋಪವೀತ, ತಲೆಕೂದಲುಗಳ ಬಂಧನ, ಊರ್ಧ್ವಪುಂಡ್ರಧಾರಣವು. ಶ್ರೀ ಮಧ್ವನಾಮ ರಹಿತನಾದ ಬ್ರಾಹ್ಮಣನಿಗೆ ಹಿಂದೆ ಹೇಳಿದ್ದೆಲ್ಲಾ ನಿಷ್ಫಲಗಳಾಗುವುವು.

ಮಧ್ವನಾಮೋರ್ಧ್ವಪುಂಡ್ರಾದಿರಹಿತೋ ಬ್ರಾಹ್ಮಣಾಧಮಃ ॥
ಸಜೀವನ್ನೇವ ಚಂಡಾಲಸ್ಸರ್ವಕರ್ಮ ಬಹಿಷ್ಕೃತಃ ॥ ೩೮ ॥

ಶ್ರೀ ಮಧ್ವನಾಮ, ಊರ್ಧ್ವಪುಂಡ್ರಾದಿಗಳಿಲ್ಲದವನು ಬ್ರಾಹ್ಮಣರಲ್ಲಿ ಅಧಮನು. ಅವನು ಜೀವಿಸಿಕೊಂಡಿರುವಾಗಲೇ ಚಂಡಾಲನು. ಸರ್ವಧರ್ಮಗಳಿಂದ ಬಹಿಷ್ಕೃತನು.

ವಿನಾ ಯಜ್ಞೋಪವೀತೇನ ವಿನಾ ಮಧ್ವಸ್ಯಕೀರ್ತನಾತ್ ।
ವಿನಾ ದ್ವೈತೇನ ಯೋವಿಪ್ರಶ್ಚಂಡಾಲತ್ವಮವಾಪ್ನುಯಾತ್ ॥ ೩೯ ॥

ಯಜ್ಞೋಪವೀತವಿಲ್ಲದೆ ಶ್ರೀಮನ್ಮಧ್ವಾಚಾರ್ಯರನ್ನು ಕೀರ್ತಿಸದೆ ದ್ವೈತಮತವನ್ನು ಅವಲಂಬಿಸದೆ ಯಾವ ಬ್ರಾಹ್ಮಣನು ಇದ್ದಾನೋ ಅವನು ಚಂಡಾಲತ್ವವನ್ನು ಹೊಂದುವನು.

ಪ್ರಾಪ್ತೇ ಕಲಿಯುಗೇ ಘೋರೆ ಧರ್ಮಜ್ಞಾನವಿವರ್ಜಿತೇ ॥
ನಕಶ್ಚಿತ್ ಸ್ಮರತೇ ಮಧ್ವಂ ಪ್ರಾಜ್ಞಂ ಶ್ರೀ ವ್ಯಾಸಸತ್ಪ್ರಿಯಂ ॥ ೪೦ ॥

ಭಯಂಕರವಾದ, ಧರ್ಮಜ್ಞಾನವಿಲ್ಲದಿರುವ ಕಲಿಯುಗ ಬಂದಿರುವ ಕಾಲದಲ್ಲಿ ಶ್ರೀ ವೇದವ್ಯಾಸರಿಗೆ ನಿರ್ವ್ಯಾಜದಿಂದ ಪ್ರೀತಿಪಾತ್ರರಾದವರೂ ಸರ್ವಜ್ಞರೂ ಆದ

ಶ್ರೀಮನ್ಮಧ್ವಾಚಾರ್ಯರನ್ನು ಒಬ್ಬನೂ ಸ್ಮರಿಸುವುದಿಲ್ಲ

ಮಧ್ವಭಕ್ತಸ್ಯ ನ ಪ್ರಾಯೋ ಹ್ಯಶುಭಂ ವಿದ್ಯತೇ ಕ್ವಚಿತ್ |
ಮಧ್ವಭಕ್ತಂ ತು ಸಂದೃಷ್ಟ್ವಾ ಅಭಕ್ತಾ ದುಃಖಮಾಪ್ನುಯುಃ || ೪೧ ||

ಶ್ರೀಮನ್ಮಧ್ವಾಚಾರ್ಯರ ಭಕ್ತರಿಗೆ ಅನೇಕವಾಗಿ ಅಶುಭವು ಎಲ್ಲಿಯೂ ಇರುವುದಿಲ್ಲ. ಶ್ರೀ ಮಧ್ವಭಕ್ತರನ್ನು ನೋಡಿ ಅಭಕ್ತರುಗಳು ದು:ಖವನ್ನು ಹೊಂದುವರು.

ಉಪಾಸ್ಯ ಪ್ರಥಮಂ ಮಧ್ವಂ ಪಶ್ಚಾನ್ನರಹರಿಂ ಯಜೇತ್ ||
ನಾನ್ಯಂಥಾ ಮೋಕ್ಷಮಾಪ್ನೋತಿ ಪ್ರತ್ಯುತ ನರಕಂ ವ್ರಜೇತ್ || ೪೨ ||

ಮೊದಲು ಶ್ರೀ ಮಧ್ವಾಚಾರ್ಯರನ್ನು ಸೇವಿಸಿ ಆಮೇಲೆ ನರಸಿಂಹದೇವರನ್ನು ಆರಾಧಿಸಬೇಕು. ಇಲ್ಲವಾದರೆ ಮೋಕ್ಷವನ್ನು ಹೊಂದುವುದಿಲ್ಲ ಮಾತ್ರವಲ್ಲದೇ ನರಕವೇ ಆಗುವುದು.

ಇಹ ಜನ್ಮಾಂತರೇ ವಾಪಿ ಪ್ರಾಜ್ಞಶ್ಚೇತ್ ಮಧ್ವನಾಮಕಂ ||
ಜ್ಞಾತ್ವೈವ ಮೋಕ್ಷಮಾಪ್ನೋತಿ ಹ್ಯನ್ಯಥಾ ತಮ ಏವಚ || ೪೩ ||

ಇಹಲೋಕದಲ್ಲಿಯೋ (ಈ ಜನ್ಮದಲ್ಲಿಯೋ) ಬೇರೆ ಜನ್ಮದಲ್ಲಿಯೋ ಪ್ರಾಜ್ಞನಾಗಿದ್ದರೆ ಶ್ರೀ ಮಧ್ವಾಚಾರ್ಯರನ್ನು ತಿಳಿದೇ ಮೋಕ್ಷವನ್ನು ಹೊಂದುತ್ತಾನೆ. ಇಲ್ಲವಾದರೆ ಅಂಧಂತಮಸ್ಸೇ.

ಕಿಂ ತಸ್ಯ ದಾನೈಃ ಕಿಂ ತೀರ್ಥೈಃ ಕಿಂ ತಪೋಭಿ ಕಿಮಧ್ವರೈಃ ||
ಯೋ ನಚಧ್ಯಾಯ:ತೇ ಮಧ್ವಂ ಪ್ರಾಜ್ಞಂ ಗುರುಮನನ್ಯಧೀಃ || ೪೪ ||

ಯಾರು ಸರ್ವಜ್ಞರಾದ, ಮತ್ತು ಗುರುವಾದ ಶ್ರೀ ಮಧ್ವಾಚಾರ್ಯರನ್ನು ಏಕಾಗ್ರಚಿತ್ತರಾಗಿ ಧ್ಯಾನಿಸುವುದಿಲ್ಲವೋ! ಅವನು ದಾನ ಮಾಡಿದ್ದರಿಂದ ಏನು ಫಲ? ತೀರ್ಥಯಾತ್ರಾದಿಗಳಿಂದ ಏನು ಪ್ರಯೋಜನ, ತಪಸ್ಸುಗಳಿಂದಲೂ ಏನು ಫಲ ಯಾಗಾದಿಗಳಿಂದ ಏನು ಫಲ ?

ಕುರುಕ್ಷೇತ್ರೇಣ ಕಿಂ ತಸ್ಯ ಪಿನಾಕಿನ್ಯಾ ಚ ತಸ್ಯ ಕಿಂ |
ಜಿಹ್ವಾಗ್ರೇ ವರ್ತತೇ ಯಸ್ಯ ಮಧ್ವ ಇತ್ಯಕ್ಷರದ್ವಯಂ || ೪೫ ||

ಯಾರ ನಾಲಿಗೆ ತುದಿಯಲ್ಲಿ ಮಧ್ವ ಎಂಬ ೨ ಅಕ್ಷರಗಳು ಇರುತ್ತವೆಯೋ ಅವನಿಗೆ ಕುರುಕ್ಷೇತ್ರದಿಂದ ಏನು ಫಲ? ಪಿನಾಕಿನೀ ನದೀಸ್ನಾನ ಮಾಡಿದ್ದರಿಂದಲೂ ಫಲವಿಲ್ಲ

ಜೀವಿತಂ ಮಧ್ವ ಭಕ್ತಸ್ಯ ವರಂ ಪಂಚದಿನಾನ್ಯಪಿ |

ನತು ಕಲ್ಪ ಸಹಸ್ರೈಸ್ತು ಭಕ್ತಿ ಹೀನಸ್ಯ ಮಾರುತಾ || ೪೬ ||

ಶ್ರೀ ಮಧ್ವಾಚಾರ್ಯರಲ್ಲಿ ಭಕ್ತಿ ಮಾಡುತ್ತಿದ್ದರೆ ೫ ದಿನಗಳಲ್ಲಿ ಬದುಕಿದರೂ ಶ್ರೇಷ್ಠವು. ಶ್ರೀ ಮಧ್ವಾಚಾರ್ಯರಲ್ಲಿ ಭಕ್ತಿ ಮಾಡದೆ ೧೦೦೦ ಸಾವಿರ ಕಲ್ಪಗಳಲ್ಲಿ ಬದುಕಿ ಏನು ಪ್ರಯೋಜನ?

ಕಿಂ ತೇನ ಜಾತಮಾತ್ರೇಣ ಭೂ ಭಾರೇಣ ಅನ್ನಶತ್ರೂಣ್ |
ಯೋ ನಿತ್ಯಂ ಧ್ಯಾಯತೇ ಭಕ್ತ್ಯಾ ಮಧ್ವ ಪ್ರಾಜ್ಞಮನನ್ಯಧೀಃ || ೪೭ ||

ಶ್ರೀ ಮಧ್ವಾಚಾರ್ಯರಲ್ಲಿ ಭಕ್ತಿಯಿಲ್ಲದೆ ಬದುಕುವುದು ಭೂಮಿ ಭಾರವೂ ಅನ್ನಕ್ಕೆ ಶತ್ರುವೂ.

ಸರಸ್ವತ್ಯಾದಿ ಜೀವೇಭ್ಯೋಽಪ್ಯುತ್ತಮತ್ವಂ ಸುಭಕ್ತತಾ |
ಜೀವಾನಾಂ ತದಧೀನತ್ವಂ ಯೋಗ್ಯಸದ್ಗುಣ ಪೂರ್ಣತಾಂ || ೪೮ ||

ನಿರ್ದೋಷತ್ವಂ ಚ ವಿಜ್ಞಾಯ ಮಧ್ವಸ್ಯ ಸಕಲಾಧಿಕ |
ಸ್ನೇಹೋ ಭಕ್ತಿರಿತಿಪ್ರೋಕ್ತ: ಪ್ರಾಯಶ್ಚಿತ್ತೋತ್ತಮಸ್ಸದಾ || ೪೯ ||

ಸರಸ್ವತ್ಯಾದಿ ಜೀವರುಕ್ಕಿಂತಲೂ ಉತ್ತಮತ್ವವನ್ನೂ, ಭಗವದ್ಭಕ್ತರಲ್ಲಿ ಶ್ರೇಷ್ಠತ್ವವನ್ನೂ, ಜೀವರುಗಳೆಲ್ಲಾ ಅವನ ಅಧೀನತ್ವವನ್ನೂ ಸ್ವರೂಪಯೋಗ್ಯವಾದ ಸದ್ಗುಣಪೂರ್ಣತ್ವವನ್ನೂ ನಿರ್ದೋಷಿತ್ವವನ್ನೂ ತಿಳಿದು ಶ್ರೀ ಮಧ್ವಾಚಾರ್ಯರಲ್ಲಿ ಭಕ್ತಿ ಮಾಡಬೇಕು. ಭಕ್ತಿಯೆಂದರೆ ಎಲ್ಲದಕ್ಕಿಂತಲೂ ಹೆಚ್ಚಾದ ಸ್ನೇಹ. ಪ್ರಾಯಶ್ಚಿತ್ತಗಳಲ್ಲಿ ಉತ್ತಮವಾದದ್ದು ಎಂತ ಹೇಳಲ್ಪಟ್ಟಿದೆ.

ಅನರ್ಪಯಿತ್ವಾ ಮಧ್ವೇಶೇ ಯೋ ಭುಂಕ್ತೇ ಮಾನವಾಧಮಃ |
ಶ್ವಾನವಿಷ್ಠಾಸಮಂ ಚಾನ್ನಂ ನೀರಂ ಚ ಸುರಯಾ ಸಮಂ || ೪೯ ||

ಶ್ರೀ ಮಧ್ವಾಚಾರ್ಯರಿಗೆ ಈಶ್ವರನಾದ ಶ್ರೀಮನ್ನಾರಾಯಣನಿಗೆ ಸಮರ್ಪಣ ಮಾಡದೆ ಯಾವ ಅಧಮ ಮಾನವನು ಭೋಜನ ಮಾಡುತ್ತಾನೋ ಅವನು ಭುಂಜಿಸಿದ ಅನ್ನವು ನಾಯಿಯ ಮಲಕ್ಕೆ ಸಮವಾದುದು, ಅವನು ಕುಡಿದ ನೀರು ಮದ್ಯಕ್ಕೆ ಸಮವು.

ಕವಲೇ ಕವಲೇ ಯಸ್ತು ಮಧ್ವಶಾಸ್ತ್ರ ವಿಚಾರಣಂ |
ಜೀವನ್ಮುಕ್ತೋಽನ್ಯಥಾ ಕುರ್ವನ್ ಕೇವಲೋದರಪೂರಣಂ || ೫೦ ||

ಯಾರು ಕವಳ ಕವಳಿಗೂ ಶ್ರೀ ಮಧ್ವಶಾಸ್ತ್ರ ವಿಚಾರ ಮಾಡುತ್ತಾನೋ ಅವನು ಜೀವನ್ಮುಕ್ತನು, ಇಲ್ಲವಾದರೆ ಕೇವಲ ಹೊಟ್ಟೆ ತುಂಬಿಸುವವನೆಂದು ಹೇಳಲ್ಪಡುತ್ತಾನೆ.

ಅಪೀತ್ವಾ ಮಧ್ವತೀರ್ಥಂ ತು ಯೋ ಭುಂಕ್ತೇ ಮನುಜೋತ್ತಮಃ |
ಶ್ವಾನವಿಷ್ಠಾಸಮಂ ಚಾನ್ನಂ ನರಕಂ ಚಾಧಿ ಗಚ್ಛತಿ || ೫೧ ||

ಶ್ರೀ ಮಧ್ವ ತೀರ್ಥವನ್ನು (ಮುಖ್ಯಪ್ರಾಣ ದೇವರಿಗೆ ಅಭಿಷೇಕ ಮಾಡಿದ ತೀರ್ಥ) ಕುಡಿಯದೇ ಯಾವ ಮನುಷ್ಯೋತ್ತಮನು ಭುಂಜಿಸುತ್ತಾನೋ ಅವನು ಭುಂಜಿಸಿದ ಅನ್ನವು ನಾಯಿಯ ಮಲಕ್ಕೆ ಸಮಾನವು. ಅವನು ನರಕಕ್ಕೆ ಹೋಗುವನು.

ಮಧ್ವ ಭಕ್ತಂ ತು ಸದ್ವಿಪ್ರಂ ಕ್ರೂರಾ ಯಮಭಟಾ ಅಪಿ |
ಸ್ವಪ್ನೇಪಿ ನೈವ ಪಶ್ಯಂತಿ ಸಮುಕ್ತಃ ಸರ್ವತೋ ಭಯಾತ್ || ೫೨ ||

ಶ್ರೀ ಮಧ್ವಾಚಾರ್ಯರ ಭಕ್ತರಾದ ಒಳ್ಳೇ ಬ್ರಾಹ್ಮಣನನ್ನು ಕ್ರೂರರಾದ ಯಮಭಟರು ಸ್ವಪ್ನದಲ್ಲಿಯೂ ಕೂಡ ನೋಡುವುದೇ ಇಲ್ಲ. ಅವನು ಎಲ್ಲಾ ಭಯದಿಂದಲೂ ಮುಕ್ತನಾಗುವನು

ತಿಸ್ರಃ ಕೋಟ್ಯರ್ಧಕೋಟ್ಯಸ್ತು ತೀರ್ಥಾನಿ ಭುವನತ್ರಯೇ |
ಮಧ್ವ ಭಕ್ತಸ್ಯ ವಿಪ್ರಸ್ಯ ಪಾದೇ ತಿಷ್ಠಂತ್ಯಸಂಶಯಃ || ೫೩ ||

ಮೂರು ಲೋಕದಲ್ಲಿರತಕ್ಕ $3\frac{1}{2}$ ಕೋಟಿ ತೀರ್ಥಾಭಿಮಾನಿ ದೇವತೆಗಳು ಶ್ರೀ ಮಧ್ವಾಚಾರ್ಯರ ಭಕ್ತರ ಪಾದದಲ್ಲಿ ಇರುತ್ತಾರೆ ಸಂದೇಹವೇ ಇಲ್ಲ.

ಯೇ ಕೇಚಿದತ್ರ ಪುರುಷಾ ಮಧ್ವಲಾಂಛನ ಲಾಂಛಿತಾಃ |
ತೇಷಾಂ ದರ್ಶನಮಾತ್ರೇಣ ಮಹಾಪಾತಕ ನಾಶನಂ || ೫೪ ||

ಯಾವ ಪುರುಷರು ಈ ಲೋಕದಲ್ಲಿ ಶ್ರೀ ಮಧ್ವರ ಚಿಹ್ನೆಗಳನ್ನು ಧರಿಸಿರುತ್ತಾರೋ ಅವರನ್ನು ನೋಡಿದ ಮಾತ್ರದಲ್ಲಿ ಮಹಾ ಪಾಪಗಳು ಪರಿಹಾರವಾಗುವುವು.

ಚತುರ್ವೇದೀತು ಯೋ ವಿಪ್ರೋ ಶ್ರೀ ಮಧ್ವಂತು ನ ವಿಂದತಿ |
ವೇದಭಾರಸಮಾಕ್ರಾಂತಃ ಸವೈ ಬ್ರಾಹ್ಮಣ ಗರ್ದಭಃ || ೫೫ ||

4 ವೇದಗಳನ್ನು ತಿಳಿದ ಯಾವ ಬ್ರಾಹ್ಮಣನು ಶ್ರೀ ಮಧ್ವ ಗುರುಗಳನ್ನು ತಿಳಿಯದವನು ವೇದವೆಂಬ ಭಾರವನ್ನು ಹೊತ್ತುಕೊಂಡ ಬ್ರಾಹ್ಮಣನೆಂಬ ಕತ್ತೆಯು.

ಮಧ್ವ ಭಕ್ತಸ್ಯ ವಿಪ್ರಸ್ಯ ಪಾದಪ್ರಕ್ಷಾಳನೋದಕಂ |
ಪುನಾತಿ ಸಕಲಂ ಲೋಕಂ ಯಥಾ ತ್ರಿಪಥ ಗಾಮಿನೀ || ೫೬ ||

ಶ್ರೀ ಮಧ್ವಾಚಾರ್ಯರ ಭಕ್ತನಾದ ಬ್ರಾಹ್ಮಣನ ಪಾದ ತೊಳೆದ ಉದಕವು ಗಂಗೆಯು ಹೇಗೆ ಎಲ್ಲಾ ಲೋಕಗಳನ್ನು ಪವಿತ್ರೀಕರಿಸುತ್ತದೋ ಹಾಗೆಯೇ ಸರ್ವ ಲೋಕಗಳನ್ನು ಪವಿತ್ರೀಕರಿಸುತ್ತದೆ.

ರಾಕ್ಷಸಾಶ್ಚ ಪಿಶಾಚಾಶ್ಚ ಗಂಧರ್ವಾ ದೈತ್ಯ ದಾನವಾಃ ।
ಮಧ್ವಭಕ್ತಸ್ಯ ದೇಹಂ ತು ದೃಷ್ಟ್ವಾ ಪಶ್ಯಂತಿ ದೂರತಃ ॥ ೫೭ ॥

ರಾಕ್ಷಸರುಗಳೂ, ಪಿಶಾಚಗಳೂ, ಗಂಧರ್ವರೂ, ದೈತ್ಯರೂ, ದಾನವರೂ ಶ್ರೀ ಮಧ್ವಭಕ್ತರ ದೇಹವನ್ನು ನೋಡಿ ದೂರದಿಂದಲೇ ನಾಶವಾಗುತ್ತಾರೆ.

ಮ್ಲೇಂಛದೇಶೇಽಶುಚೌವಾಪಿ ಮಧ್ವಶಾಸ್ತ್ರಂ ತು ಯತ್ರವೈ ।
ಯೋಜನಾನಿ ತಥಾ ತ್ರೀಣಿ ಮಧ್ವ ಕ್ಷೇತ್ರಂ ವಸುಂಧರಾ ॥ ೫೮ ॥

ಅಶುಚಿಯಾದ ಮ್ಲೇಂಛ ದೇಶವಾಗಿದ್ದರೂ ಎಲ್ಲಿಯಾದರೂ ಶ್ರೀ ಮಧ್ವ ಶಾಸ್ತ್ರವಿದ್ದರೆ 3 ಯೋಜನ ವಿಸ್ತೀರ್ಣ ಭೂಮಿ ಶ್ರೀಮನ್‌ಮಧ್ವಕ್ಷೇತ್ರವೇ.

ಮಧ್ವಶಾಸ್ತ್ರಂ ಪರಿತ್ಯಜ್ಯ ದುಷ್ಟಶಾಸ್ತ್ರಂ ಭಜೇದ್ಯದಿ ।
ಕಂಠೇ ತಸ್ಯ ಶಿಲಾಂ ಬದ್ಧ್ವಾ ಸಿಂಧುಮಧ್ಯೇ ವಿನಿಕ್ಷಿಪೇತ್ ॥ ೫೯ ॥

ಶ್ರೀ ಮಧ್ವಶಾಸ್ತ್ರವನ್ನು ಬಿಟ್ಟು ದುಷ್ಟ ಶಾಸ್ತ್ರವನ್ನು (ಮಾಯಾವಾದಿ ಶಾಸ್ತ್ರವನ್ನು ಸೇವಿಸಿದರೆ ಅವನ ಕಂಠದಲ್ಲಿ ಶಿಲೆಯನ್ನು ಕಟ್ಟಿ ಸಮುದ್ರ ಮಧ್ಯದಲ್ಲಿ ಅವನನ್ನು ಹಾಕಬೇಕು.

ವ್ಯಾಸಶಾಸ್ತ್ರಂ ತು ಸಚ್ಛಾಸ್ತ್ರಂ ಮಧ್ವಶಾಸ್ತ್ರಂ ತಥೈವಚ ।
ಏತದನ್ಯಂ ತು ಯುಚ್ಛಾಸ್ತ್ರಂ ಅಸಚ್ಛೇತಿ ವಿದುರ್ಬುಧಾಃ ॥ ೬೦ ॥

ವೇದವ್ಯಾಸರಿಂದ ರಚಿತವಾದ ಶಾಸ್ತ್ರವು ಸಚ್ಛಾಸ್ತ್ರವು ಹಾಗೆಯೇ ಶ್ರೀ ಮಧ್ವಶಾಸ್ತ್ರವೂ ಸಚ್ಛಾಸ್ತ್ರವು ಇದಕ್ಕೆ ಅನ್ಯವಾದ ಶಾಸ್ತ್ರವು ಅಸಚ್ಛಾಸ್ತ್ರವೆಂದು ಜ್ಞಾನಿಗಳು ತಿಳಿದುಕೊಂಡಿದ್ದಾರೆ.

ಮಧ್ವಶಾಸ್ತ್ರಂ ಪರಿತ್ಯಜ್ಯ ದುಷ್ಟಶಾಸ್ತ್ರಂ ಭಜೇದ್ಯದಿ ।
ಕಲ್ಪವೃಕ್ಷಂ ಪರಿತ್ಯಜ್ಯ ಪಿಚುಮಂದಂ ಭಜೇತ್ಸವೈ ॥ ೬೧ ॥

ಮಧ್ವಶಾಸ್ತ್ರವನ್ನು ಬಿಟ್ಟು ದುಷ್ಟ ಶಾಸ್ತ್ರವನ್ನು ಸೇವಿಸಿದರೆ ಕಲ್ಪವೃಕ್ಷವನ್ನು ಬಿಟ್ಟು ಬೇವಿನ ಮರವನ್ನು ಸೇವಿಸಿದ ಹಾಗೆ ಆಗುವುದು.

ಮಧ್ವಶಾಸ್ತ್ರಪ್ರವಕ್ತಾ ಹಿ ಯತ್ಕೃತ ತತ್ಕೃತಂ ಭವೇತ್ ।
ಸಾಧಿತಸ್ತೇ ನ ಮೋಕ್ಷೋವೈಹಿ ಯೋಗಿನಾಮಪಿ ದುರ್ಲಭಃ ॥ ೬೨ ॥

ಶ್ರೀ ಮಧ್ವಶಾಸ್ತ್ರವನ್ನು ಪ್ರವಚನ ಮಾಡುವವನಿಂದ ಯಾವುದು ಮಾಡಲ್ಪಡುತ್ತದೋ ಅದು ಸರಿಯಾಗಿಯೇ ಮಾಡಲ್ಪಡುವುದು, ಆಗುವುದು. ಅವನಿಂದ ಯೋಗಿಗಳಿಗೂ ದುರ್ಲಭವಾದ ಮೋಕ್ಷವು ಸಾಧಿಸಲ್ಪಡುವುದು.

ಮಧ್ವಶಾಸ್ತ್ರಂ ವಿನಾ ಮುಕ್ತಿಃ ತೈಲಾಭಾವೇಚ ದೀಪವತ್ |
ಅನ್ಯ ಶಾಸ್ತ್ರೇಣ ಯಾ ಮುಕ್ತಿ ವಿಷ ಸಂಪರ್ಕಖಾದ್ಯವತ್ || ೬೩ ||

ಶ್ರೀ ಮಧ್ವ ಶಾಸ್ತ್ರವನ್ನು ಬಿಟ್ಟು ಮೋಕ್ಷವುಂಟಾಗುತ್ತದೆಂದರೆ ಎಣ್ಣೆಯಿಲ್ಲದೇ ದೀಪ ಉರಿಯುವುದು ಹೇಗೆ ಸಾಧ್ಯವಿಲ್ಲವೋ ಹಾಗೆ ಸಾಧ್ಯವಾಗಲಾರದೆಂದರ್ಥ. ಬೇರೆ ಶಾಸ್ತ್ರಗಳಿಂದ ಮೋಕ್ಷವೆಂಬುದು ವಿಷ ಸಂಪರ್ಕದಿಂದ ಮಿಶ್ರವಾದ ತಿನ್ನುವ ಆಹಾರದಂತೆ ಅಂದರೆ ಹೇಗೆ ಅನರ್ಥವೇ ಉಂಟಾಗುವುದೋ ಹಾಗೆ ಅನರ್ಥಗಳು ಉಂಟಾಗುವುವು ಎಂದರ್ಥ.

ಮಧ್ವಶಾಸ್ತ್ರೇಣ ಯಾ ಮುಕ್ತಿಃ ಕ್ಷೀರಸಂಪರ್ಕಖಾದ್ಯವತ್ |
ತಸ್ಮಾತ್ ಸರ್ವ ಪ್ರಯತ್ನೇನ ಮಧ್ವಶಾಸ್ತ್ರಂ ಭಜೇತ್ ಸುಧೀಃ || ೬೪ ||

ಶ್ರೀ ಮಧ್ವಶಾಸ್ತ್ರದಿಂದುಂಟಾಗುವ ಮೋಕ್ಷವು ಕ್ಷೀರದಿಂದ ಕೂಡಿದ ಆಹಾರ ದಂತೆ ಕೇವಲ ಸುಖವನ್ನೇ ಉಂಟುಮಾಡುವುದು. ಆದುದರಿಂದ ಪ್ರಯತ್ನಪೂರ್ವಕ ವಾಗಿ ಒಳ್ಳೇ ಬುದ್ಧಿಯುಳ್ಳವನು ಶ್ರೀ ಮಧ್ವಶಾಸ್ತ್ರವನ್ನು ಸೇವಿಸಬೇಕು

ಸರ್ವೋತ್ತಮೋ ಹರಿರ್ನಿತ್ಯಂ ಮಧ್ವೋ ಜೀವೋತ್ತಮೋಮತಃ |
ಶೇಷಾದಿ ಸರ್ವಜೀವಾನಾಂ ತತ್ತಚ್ಛಕ್ತಿ ಪ್ರದಾಯಕಃ || ೬೫ ||

ಶ್ರೀ ಹರಿಯೇ ಯಾವಾಗಲೂ ಸರ್ವೋತ್ತಮನು. ಆದಿಶೇಷಾದಿ ಸಕಲ ಜೀವರುಗಳಿಗೆ ಆಯಾಯಾ ಶಕ್ತಿಪ್ರದಾಯಕ ಶ್ರೀ ಮಧ್ವರು ಎಲ್ಲಾ ಜೀವರುಗಳಿಗೆ ಉತ್ತಮವಿಂದೆನಿಸಿಕೊಳ್ಳುವರು.

ರುದ್ರಶೇಷಾದಿ ಸಜ್ಜೀವಾ ಮಧ್ವಶಾಸ್ತ್ರಂ ಪುನಃ ಪುನಃ |
ಶೃಣ್ವಂತಿ ಸಾದರಾನ್ನಿತ್ಯಂ ತೇನ ಮುಕ್ತಿಮವಾಪ್ನುಯುಃ || ೬೬ ||

ರುದ್ರ, ಶೇಷಾದಿ ಸಜ್ಜನರು ಮತ್ತು ಮತ್ತು ಸಾದರದಿಂದ ನಿತ್ಯದಲ್ಲಿಯೂ ಶ್ರೀ ಮಧ್ವಶಾಸ್ತ್ರವನ್ನು ಶ್ರವಣ ಮಾಡುತ್ತಾರೆ. ಅದರಿಂದ ಮೋಕ್ಷವನ್ನು ಹೊಂದು ತ್ತಾರೆ.

ವಾಸುದೇವಾಜ್ಞಯಾ ತೇಪಿ ಸದಾ ಮಧ್ವವಶೇ ಸ್ಥಿತಾಃ |
ಮಧ್ವದ್ವೇಷ ಪ್ರತೀಪಂ ತುನ ಕುರ್ವಂತಿ ಕದಾಚನ || ೬೭ ||

ಅಶೇಷ ರುದ್ರಾದಿಗಳೂ ಶ್ರೀ ಭಗವಂತನ ಆಜ್ಞೆಯಿಂದ ಯಾವಾಗಲೂ ಶ್ರೀ ಮಧ್ವಾಚಾರ್ಯರ ವಶದಲ್ಲಿಯೇ ಇರುವವರು. ಶ್ರೀ ಮಧ್ವಾಚಾರ್ಯರ ವಿರೋಧ ವನ್ನು ಯಾವಾಗಲೂ ಮಾಡುವುದಿಲ್ಲ.

ಗಾಯಂತ್ಯದ್ಯಾಪಿ ವೇದಾಶ್ಚ ಮಧ್ವನಾರಾಯಣಾಜ್ಞಯಾ |

ಪುನರಾವರ್ತನಂ ಮಧ್ವಮಾಶ್ರಿತಾನಾಂ ಕುತಃ ಪ್ರಭೋ ॥ ೧೮ ॥

ಶ್ರೀಮನ್ನಾರಾಯಣನ ಆಜ್ಞೆಯಿಂದ ಈಗಲೂ ವೇದಗಳು ಶ್ರೀ ಮಧ್ವಾಚಾರ್ಯರನ್ನು ಗಾನ ಮಾಡುತ್ತಿವೆ. ಮಧ್ವಾಚಾರ್ಯರನ್ನು ಆಶ್ರಯಿಸಿದವರಿಗೆ ಪುನಾರಾವೃತ್ತಿ ಯಾವುದು?

ಭಾರತೀರಮಣೋ ಮಧ್ವಃ ಸೃಷ್ಟಿಸ್ಥಿತ್ಯಂತಕಾರಕ ।
ವಾಸುದೇವಾಜ್ಞಯಾ ನಿತ್ಯಂ ದುಷ್ಟಾನಾಂ ಪ್ರಾಣಘಾತಕಃ ॥ ೧೯ ॥

ಭಾರತೀಪತಿ ಮುಖ್ಯಪ್ರಾಣ ಸ್ವರೂಪರಾದ ಶ್ರೀ ಮಧ್ವಾಚಾರ್ಯರು ಶ್ರೀ ಭಗವಂತನ ಆಜ್ಞಾನುಸಾರ ಸೃಷ್ಟಿ, ಸ್ಥಿತಿ, ಲಯಾದಿಗಳನ್ನು ಮಾಡತಕ್ಕವರೂ ನಿರಂತರವೂ ದುಷ್ಟರ ಪ್ರಾಣವನ್ನು ನಾಶಮಾಡತಕ್ಕವರೂ ಆಗಿರುತ್ತಾರೆ.

ಸಾಂಕೇತಂ ಪಾರಿಹಾಸ್ಯಂ ವಾ ಸ್ತೋಭಂ ಹೇಲನಮೇವಚ ।
ಶ್ರೀಮಧ್ವನಾಮಗ್ರಹಣಂ ಅಶೇಷಾಘವಿನಾಶಕಂ ॥ ೨೦ ॥

ಶ್ರೀ ಮಧ್ವಾಚಾರ್ಯರೆಂದು ಒಬ್ಬನಿಗೆ ಸಂಕೇತ ಮಾಡೋಣದರಿಂದಲೋ ಗೋಪೀಚಂದನ ಮುದ್ರೆಗಳನ್ನು ಹಚ್ಚಿಕೊಂಡವನನ್ನು ನೋಡಿ ಇವನನ್ನು ನೋಡುವಾಗ ಮಧ್ವಾಚಾರ್ಯರೇ ಎಂತ ಅಪಹಾಸದಿಂದಲೋ ಕೋಪವನ್ನುಂಟುಮಾಡಲು ಸಾಧಾರಣ ಸುಖವನು ಂಟುಮಾಡುವ ಒಂದು ಶ್ಲೋಕವನ್ನು ಬರೆಯಲಾಗದವನು ಮೋಕ್ಷಾನಂದವನ್ನುಂಟುಮಾಡುವ ಶಾಸ್ತ್ರವನ್ನು ಬರೆದ ಮಧ್ವಾಚಾರ್ಯರಂತೆ ಇವನು ಎಂತ ಒಬ್ಬನಿಗೆ ಸ್ತೋಭವನ್ನುಂಟು (ಕಳವಳವನ್ನು) ಮಾಡುವುದರಿಂದಲೋ ಅವನು ನಿತ್ಯಸುಖವನ್ನು ಕೊಡುವ ಶಾಸ್ತ್ರವನ್ನು ಬರೆದ ಮಧ್ವರಂತೆ ಎಂದು ಹೇಳನ ಮಾಡುವುದರಿಂದಲೋ ಶ್ರೀ ಮಧ್ವಾಚಾರ್ಯರ ನಾಮಗ್ರಹಣವು ಎಲ್ಲಾ ಪಾಪವನ್ನು ನಾಶ ಮಾಡುವುದು ಯಾವುದೋ ಕಾರಣದಿಂದ ಶ್ರೀ ಮಧ್ವಾಚಾರ್ಯರ ಸ್ಮರಣ ಬಂದು ಅವರ ನಾಮಗ್ರಹಣಕ್ಕೆ ಪಾಪ ಪರಿಹಾರ ಮಾಡುವ ಶಕ್ತಿ ಇದೆ ಎಂದರ್ಥ.

ಅಸ್ಮೃತ್ವಾ ಪ್ರಥಮಂ ಮಧ್ವಂ ವಾಸುದೇವಂ ಸ್ಮರೇದ್ಧಿಯಃ ।
ನಿಷ್ಫಲಂ ತು ಭವೇತ್ತಚ್ಚ ವಂಧ್ಯಾಸ್ತ್ರೀಮೈಥುನಂ ಯಥಾ ॥ ೨೧ ॥

ಮೊದಲು ಶ್ರೀ ಮಧ್ವಾಚಾರ್ಯರನ್ನು ಸ್ಮರಿಸದೆ ಶ್ರೀ ಭಗವಂತನನ್ನು ಯಾರು ಸ್ಮರಿಸುತ್ತಾರೋ ಅದು ಗೊಡ್ಡು ಸ್ತ್ರೀಯರ ಸಂಗ ಹೇಗೆ ನಿಷ್ಫಲವಾಗುತ್ತದೋ (ಹೇಗೆ ಮಕ್ಕಳು ಹುಟ್ಟದೆ ನಿಷ್ಫಲವಾಗುತ್ತದೋ) ಹಾಗೆ ನಿಷ್ಫಲವಾಗುತ್ತದೆ

ವಾಸುದೇವಂ ಸ್ಮಾರಯಿತ್ವಾ ಮಧ್ವದೇವಂ ತು ನ ಸ್ಮರೇತ್ ।
ತೇನ ಮುಕ್ತಿರ್ನ ಭವೇತ್ ವೃಥಾ ಕಂಠಸ್ಯ ಶೋಷಣಂ ॥ ೨೨ ॥

ಶ್ರೀ ಭಗವಂತನನ್ನು ಸ್ಮರಿಸಿ ಶ್ರೀ ಮಧ್ವಾಚಾರ್ಯರನ್ನು ಸ್ಮರಿಸದಿದ್ದರೆ

ಅದರಿಂದ ಮುಕ್ತಿಯುಂಟಾಗಲಾರದು. ವ್ಯರ್ಥವಾಗಿ ಕಂಠ ಶೋಷಣೆಯಾಗುವುದು.

ತಸ್ಮಾತ್ ಮಧ್ವಸ್ಯ ನಾಮ್ನಾ ಹಿ ಸಹಿತಂ ನಾಮ ಚಸ್ಮರೇತ್ |
ನಾರಾಯಣಸ್ಯ ವಿಪ್ರೋಹಿ ತಸ್ಯ ಮುಕ್ತಿರ್ಭವೇದ್ಧ್ರುವಂ || ೭೩ ||

ಆದ್ದರಿಂದ ಶ್ರೀ ಮಧ್ವಾಚಾರ್ಯರ ಹೆಸರಿನಿಂದ ಸಹಿತವಾಗಿ ಶ್ರೀಮನ್ನಾ-ರಾಯಣನ ಹೆಸರನ್ನು ಯಾರು ಸ್ಮರಿಸುತ್ತಾರೋ ಆ ಬ್ರಾಹ್ಮಣನಿಗೆ ನಿಶ್ಚಯ ವಾಗಿಯೂ ಮೋಕ್ಷವುಂಟಾಗುವುದು.

ಮಧ್ವಾತ್ಮಕಲ್ಪವೃಕ್ಷಸ್ಯ ದೂಷಕಾ ಮಾಯಿನಸ್ತಥಾ |
ತೇಷಾಂ ವೈ ದೂಷಕಾ ಯೇತು ಮುಕ್ತಿಯೋಗ್ಯಾ ನ ಸಂಶಯಃ || ೭೪ ||

ಶ್ರೀ ಮಧ್ವಾಚಾರ್ಯರೆಂಬ ಕಲ್ಪವೃಕ್ಷವನ್ನು ದೂಷಿಸುವ ಮಾಯಾವಾದಿ ಗಳನ್ನು ದೂಷಿಸುವವರು ಮುಕ್ತಿಯೋಗ್ಯರೇ ಸಂಶಯವೇ ಇಲ್ಲ.

ಕಾಯೇನ ಮನಸಾ ವಾಚಾ ಶ್ರೀ ಮಧ್ವಗುರು ದೂಷಕಾಃ |
ತೇಷಾಂ ವೈ ದೂಷಕಾ ಯೇತು ತೇಪಿಯಾಂತಿ ನ ಸಂಶಯಃ || ೭೫ ||

ಮನೋವಾಕ್ಕಾಯಗಳಿಂದ ಶ್ರೀ ಮಧ್ವ ಗುರುಗಳನ್ನು ದೂಷಿಸುವವರೂ ಅಂಧಂತಮಸ್ಸಿಗೆ ಹೋಗುತ್ತಾರೆ ಅವರನ್ನು ಯಾರು ದೂಷಿಸುವರೋ ಅವರು ಮುಕ್ತಿಗೆ ಹೋಗುತ್ತಾರೆ

ಮಧ್ವಾಖ್ಯ ಕಾಮಧೇನೋಶ್ಚ ದೂಷಕಾ ಮಾಯಿಗರ್ದಭಾಃ |
ತೇಷಾಂ ದರ್ಶನಮಾತ್ರೇಣ ಪಾತಿತ್ಯಂ ಜ್ಞಾನಿನೋಪಿಹಿ || ೭೬ ||

ಶ್ರೀ ಮಧ್ವಾಚಾರ್ಯರೆಂಬ ಕಾಮಧೇನುವನ್ನು ದೂಷಿಸುವ ಮಾಯಾ ವಾದಿಗಳೆಂಬ ಕತ್ತೆಗಳು ಯಾರು ಇರುವರೋ ಅವರನ್ನು ನೋಡಿದ ಮಾತ್ರದಿಂದ ಜ್ಞಾನಿಗಳೂ ಪಾತಿತ್ಯವನ್ನು ಹೊಂದುವರು.

ಮಧ್ವಸ್ಯ ದ್ವೇಷಿಣೋ ವಿಪ್ರಾಃ ಚಂಡಾಲಾದಧಮಾಧಮಾಃ |
ತೇಷಾಂ ಸಂಭಾಷಣಸ್ಪರ್ಶೌ ವರ್ಜಯೇಚ್ಚ ವಿಚಕ್ಷಣಃ || ೭೭ ||

ಶ್ರೀ ಮಧ್ವಾಚಾರ್ಯರನ್ನು ದ್ವೇಷಿಸುವ ಬ್ರಾಹ್ಮಣರು ಚಂಡಾಲರು ಕ್ಕಿಂತಲೂ ಅಧಮಾಧಮರು. ಜ್ಞಾನಿಯು ಅವರ ಹತ್ತಿರ ಸಂಭಾಷಣೆಯನ್ನೂ, ಅವರ ಸ್ಪರ್ಶವನ್ನೂ ಬಿಡಬೇಕು.

ಮಧ್ವಸ್ಯ ದ್ವೇಷಿಣೋಽನ್ನಂ ತು ಭುಂಜಂತೇ ಯೇ ನರಾಧಮಾಃ |
ಅವಲೋಕ್ಯಮುಖಂ ತೇಷಾಮಾದಿತ್ಯಮವಲೋಕಯೇತ್ || ೭೮ ||

ಶ್ರೀ ಮಧ್ವಾಚಾರ್ಯರ ದ್ವೇಷಿಗಳ ಅನ್ನವನ್ನು ಯಾವ ಅಧಮ ಮನುಷ್ಯರು ಭೋಜನ ಮಾಡುತ್ತಾರೋ ಅವರ ಮುಖವನ್ನು ನೋಡಿ ಸೂರ್ಯನನ್ನು ನೋಡಬೇಕು

ಮಧ್ವಸ್ಯ ದ್ವೇಷಿಣೋ ದ್ರವ್ಯಂ ಕಾಂಕ್ಷಂತೇ ಯೇ ನರಾಧಮಾಃ ।
ಅವಲೋಕ್ಯ ಮುಖಂ ತೇಷಾಂ ಆದಿತ್ಯಮವಲೋಕಯೇತ್ ॥ ೭೯ ॥

ಯಾವ ನರಾಧಮನು ಶ್ರೀ ಮಧ್ವಾಚಾರ್ಯರ ದ್ವೇಷಿಗಳ ದ್ರವ್ಯವನ್ನು ಇಚ್ಛಿಸುತ್ತಾನೋ ಅವರ ಮುಖವನ್ನು ನೋಡಿ ಸೂರ್ಯನನ್ನು ನೋಡಬೇಕು

ವರಂ ಸ್ವಮಾತೃ ಗಮನಂ ವರಂ ಗೋಮಾಂಸ ಭಕ್ಷಣಂ ।
ವರಂ ಹತ್ಯಾ ಸುರಾಪಾನಂ ಮಧ್ವಸ್ಯ ದ್ವೇಷಿವಂದನಾತ್ ॥ ೮೦ ॥

ಶ್ರೀ ಮಧ್ವಾಚಾರ್ಯರ ದ್ವೇಷಿಗಳ ವಂದನಕ್ಕಿಂತ ತನ್ನ ಮಾತೃಗಮನ ಉತ್ತಮ. ಗೋಮಾಂಸ ಭಕ್ಷಣವು ಶ್ರೇಷ್ಠವು. ಹಿಂಸಾ, ಸುರಾಪಾನಾದಿಗಳೂ ಶ್ರೇಷ್ಠವು. (ಅಂದರೆ ಮಾತೃಗಮನಾದಿಗಳೂ, ಗೋಮಾಂಸ ಭಕ್ಷಣಾದಿಗಳೂ, ಹಿಂಸೆಯೂ, ಸುರಾಪಾನಾದಿಗಳೂ ಮಹಾ ಪಾಪ. ಅದಕ್ಕಿಂತಲೂ ಆಚಾರ್ಯರ ದ್ವೇಷಿಗಳ ವಂದನವು ಹೆಚ್ಚು ಪಾಪವೆಂದರ್ಥ.)

ಸ ಬ್ರಹ್ಮಹಾ ಸ ಗೋಘ್ನಶ್ಚ ಸ್ತೇಯೀ ಸ ಗುರುತಲ್ಪಗಃ ।
ಮಿತ್ರದ್ರೋಹೀ ಸ ಏವ ಸ್ಯಾತ್ ಮಧ್ವಸ್ಯದ್ವೇಷ್ಯದೂಷಕಃ ॥ ೮೧ ॥

ಶ್ರೀ ಮಧ್ವಾಚಾರ್ಯರ ದ್ವೇಷಿಗಳನ್ನು ದೂಷಿಸದವನು, ಬ್ರಹ್ಮಹತ್ಯಾ ಮಾಡಿದವನಿಗೂ, ಗೋಹತ್ಯಾ ಮಾಡಿದವನಿಗೂ, ಗುರುಭಾರ್ಯಾಗಮನ ಮಾಡಿದವನಿಗೂ, ಮಿತ್ರದ್ರೋಹಿಗೂ ಸದೃಶನಾಗುವನು.

ಚಂಡಾಲೋಪಿ ನ ಚಂಡಾಲಃ ಮಾತೃಗಾಮೀ ನ ದೋಷಭಾಕ್ ।
ಚಂಡಾಲಸ್ತು ವಿಜ್ಞೇಯೋ ಮಧ್ವಸ್ಯದ್ವೇಷ್ಯದೂಷಕಃ ॥ ೮೨ ॥

ಚಂಡಾಲನೂ ಚಂಡಾಲನಲ್ಲ, ಮಾತೃಗಮನ ಮಾಡಿದವನಿಗೂ ದೋಷವಿಲ್ಲ, ಶ್ರೀ ಮಧ್ವಾಚಾರ್ಯರ ದ್ವೇಷಿಗಳನ್ನು ದೂಷಿಸದವನು ಚಂಡಾಲನೆಂದು ತಿಳಿದುಕೊಳ್ಳಬೇಕು.

ಮಧ್ವಸ್ಯ ದ್ವೇಷಿಣೋ ನಿತ್ಯಂ ತಮೋಯಾಂತಿ ನ ಸಂಶಯಃ ।
ತತೋಽಧಿಕಂ ತಮೋಯಾಂತಿ ವಿಪ್ರಾಸ್ತೇಷಾಮನಿಂದಕಾಃ ॥ ೮೩ ॥

ಶ್ರೀ ಮಧ್ವಾಚಾರ್ಯರ ದ್ವೇಷಿಗಳು ನಿತ್ಯ ನರಕಕ್ಕೆ ಹೋಗುತ್ತಾರೆ. ಸಂಶಯವೇ ಇಲ್ಲ. ಶ್ರೀ ಮಧ್ವಾಚಾರ್ಯ ದ್ವೇಷಿಗಳನ್ನು ನಿಂದಿಸದ ಬ್ರಾಹ್ಮಣರು ಅದ

ಕ್ಕಿಂತಲೂ ಹೆಚ್ಚಾದ ತಮಸ್ಸಿಗೆ ಹೋಗುತ್ತಾರೆ.

ಯದ್ದಿನಂ ಮಧ್ವಸಲ್ಲಾಪ ಕಥಾಭಿಶ್ಚ ವಿವರ್ಜಿತಂ |
ತದ್ದಿನಂ ದುರ್ದಿನಂ ಮನ್ಯೇ ಮೇಘಚ್ಛನ್ನಂ ನ ದುರ್ದಿನಂ || ೮೪ ||

ಯಾವ ದಿನ ಶ್ರೀ ಮಧ್ವಾಚಾರ್ಯರ ಸಂಭಾಷಣಾದಿಗಳಿಂದಲೂ ಕಥೆಗಳಿಂದಲೂ ಶೂನ್ಯವಾಗಿರುತ್ತದೋ ಆ ದಿನವೇ ದುರ್ದಿನವೆಂದು ತಿಳಿಯುತ್ತೇನೆ. ಮೇಘಾಚ್ಛಾದಿತ ದಿನವು ದುರ್ದಿನವಲ್ಲ.

ಯದ್ದಿನಂ ಮಧ್ವರಾಜಸ್ಯ ದ್ವೇಷಿದೂಷಣ ವರ್ಜಿತಂ |
ತದ್ದಿನಂ ದುರ್ದಿನಂ ಮನ್ಯೇ ಮೇಘಚ್ಛನಂ ನ ದುರ್ದಿನಂ || ೮೫ ||

ಯಾವ ದಿನವು ಶ್ರೀ ಮಧ್ವರಾಜಾಚಾರ್ಯ ದ್ವೇಷಿಗಳ ದೂಷಣ ವರ್ಜಿತವಾಗುತ್ತದೋ ಅದೇ ದಿನವೇ ದುರ್ದಿನ. ಮೇಘಚ್ಛನ್ನವಾದ ದಿನ ದುರ್ದಿನವಲ್ಲ.

ಕಿಮತ್ರ ಬಹುನೋಕ್ತೇನ ಪುರಾಣೇಷು ಸ್ಮೃತಿಷ್ವಪಿ |
ಮುಕ್ತಿಯೋಗ್ಯಾ ಮಧ್ವಭಕ್ತಾಃ ತಮೋ ಯೋಗ್ಯಾಸ್ತುಮಾಯಿನಃ || ೮೬ ||

ಈ ವಿಷಯದಲ್ಲಿ ಹೆಚ್ಚು ಹೇಳಿ ಏನು ಪ್ರಯೋಜನ? ಪುರಾಣಗಳಲ್ಲಿಯೂ ಸ್ಮೃತಿಗಳಲ್ಲಿಯೂ ಶ್ರೀ ಮಧ್ವಭಕ್ತರು ಮುಕ್ತಿಯೋಗ್ಯರೆಂದೂ ಮಾಯಾವಾದಿಗಳು ತಮೋಯೋಗ್ಯರೆಂದೂ ಹೇಳಲ್ಪಟ್ಟಿವೆ.

ವಿದ್ಯಾರಂಭೇ ವಿವಾಹೇಚ ಕೃಷ್ಯಾರಂಭೇ ತಥೈವ ಚ |
ರಾಜದ್ವಾರೇ ಸಭಾಮಧ್ಯೇ ಗುರುಂ ಮಧ್ವಂ ಚ ಸಂಸ್ಮರೇತ್ || ೮೭ ||

ವಿದ್ಯಾರಂಭದಲ್ಲಿಯೂ, ವಿವಾಹದಲ್ಲಿಯೂ, ಕೃಷಿಯ ಆರಂಭದಲ್ಲಿಯೂ ಹಾಗೆಯೇ ರಾಜದ್ವಾರದಲ್ಲಿಯೂ, ಸಭಾಮಧ್ಯದಲ್ಲಿಯೂ ಗುರುಗಳಾದ ಶ್ರೀ ಮಧ್ವಾಚಾರ್ಯರನ್ನು ಸ್ಮರಿಸಬೇಕು.

ಕದಾಚಿನ್ಮಧ್ವಭಕ್ತಸ್ಯ ಪಾತಕಂ ಘಟತೇ ಯದಿ |
ಯಮಸ್ತಂ ನೇಕ್ಷಿತುಂ ಶಕ್ತಃ ಶ್ರೀ ಮಧ್ವಗುರು ಶಾಸನಾತ್ || ೮೮ ||

ಶ್ರೀ ಮಧ್ವಾಚಾರ್ಯರ ಭಕ್ತನಿಗೆ ಯಾವಾಗಲಾದರೂ ಪಾಪಕರ್ಮವು ಸಂಘಟಿಸಿದರೆ ಶ್ರೀ ಮಧ್ವಾಚಾರ್ಯರ ಆಜ್ಞೆಯಿಂದ ಯಮನಿಗೆ ಅವನನ್ನು ನೋಡಲಿಕ್ಕೂ ಸಾಧ್ಯವಿಲ್ಲ.

ಮಧ್ವರಾಜಂ ಸಮಾಶ್ರಿತ್ಯ ತಿಷ್ಠಂತಿ ಯಮಪೂರ್ವಕಾಃ |
ಅತಸ್ತಂ ನೇಕ್ಷಿತುಂ ಶಕ್ತಾಃ ಕ್ರೂರಾ ಯಮಭಟಾ ಅಪಿ || ೮೯ ||

ಶ್ರೀ ಗುರುರಾಜ ಮಧ್ವಾಚಾರ್ಯರನ್ನು ಆಶ್ರಯಿಸಿ ಯಮ ಮೊದಲಾದವರು ಇರುತ್ತಾರೆ. ಅದುದರಿಂದ ಕ್ರೂರರಾದ ಯಮಭಟರಿಗೂ ಆ ಭಕ್ತನನ್ನು ನೋಡಲಿಕ್ಕೆ ಶಕ್ತಿಯಿಲ್ಲ.

ಶ್ರೀ ಮಧ್ವಶಾಸ್ತ್ರವಿದೋ ವಿಪ್ರಾ ಯಂ ಯಂ ಪಶ್ಯಂತಿ ಚಕ್ಷುಷಾ |
ತಂ ತಂ ಶುದ್ಧಂ ವಿಜಾನೀಯಾತ್ ನಾತ್ರ ಕಾರ್ಯಾವಿಚಾರಣಾ || ೯೦ ||

ಶ್ರೀ ಮಧ್ವಶಾಸ್ತ್ರವನ್ನು ತಿಳಿದ ಬ್ರಾಹ್ಮಣರು ಕಣ್ಣಿನಿಂದ ಯಾರನ್ನು ಯಾರನ್ನು ನೋಡುತ್ತಾರೋ ಅವರವರನ್ನು ಶುದ್ಧನನ್ನಾಗಿ ತಿಳಿದುಕೊಳ್ಳಬೇಕು. ಈ ವಿಷಯದಲ್ಲಿ ಸಂದೇಹವೇ ಇಲ್ಲ.

ನಿತ್ಯೋತ್ಸವೋ ಭವತ್ಯೇಷಾಂ ನಿತ್ಯಂ ಶ್ರೀರ್ನಿತ್ಯಮಂಗಳಂ |
ಯೇಷಾಂ ಹೃದಿಸ್ಥೋ ಭಗವಾನ್ ಮಧ್ವಃ ಪಾಪೌಘನಾಶನಃ || ೯೧ ||

ಯಾರ ಹೃದಯದಲ್ಲಿ ಪಾಪಗಳ ಸಮೂಹವನ್ನೇ ನಾಶ ಮಾಡುವ ಭಗವತ್ಪಾದರಾದ ಶ್ರೀ ಮಧ್ವಾಚಾರ್ಯರು ಇರುತ್ತಾರೋ ಅವರಿಗೆ ನಿತ್ಯ ಉತ್ಸವವೂ, ನಿತ್ಯ ಸಂಪತ್ತೂ, ನಿತ್ಯ ಮಂಗಳವೂ ಉಂಟಾಗುತ್ತದೆ.

ಮಧ್ವಭಕ್ತಂ ತು ಸಂಸ್ಮೃತ್ಯ ನರಕಾದುಧೃತಿರ್ಭವೇತ್ |
ಯಾಮ್ಯಂ ಚ ನರಕಂ ತ್ಯಕ್ತ್ವಾ ಮೋಕ್ಷಮಾರ್ಗಮವಾಪ್ನುಯುಃ || ೯೨ ||

ನರಕಸ್ಥರಿಗೆ ಶ್ರೀ ಮಧ್ವರ ಭಕ್ತರನ್ನು ಸ್ಮರಿಸಿ ನರಕದಿಂದ ಉದ್ಧಾರವುಂಟಾಗುವುದು. ಯಮಲೋಕದಲ್ಲಿದ್ದ ನರಕವನ್ನು ಬಿಟ್ಟು ಮೋಕ್ಷ ಮಾರ್ಗವನ್ನು ಹೊಂದುವರು.

ಯೇ ಜನಾಃ ಮಾರುತಂ ಮಧ್ವಂ ಸೇವಂತೇ ಜ್ಞಾನಿನಃ ಸದಾ |
ತೇ ಜನಾಃ ಪ್ರಾಪ್ನುವಂತ್ಯೇವ ಮಧ್ವರಾಜಸ್ಯ ಶಾಸನಾತ್ || ೯೩ ||

ಯಾವ ಜನರು ವಾಯುದೇವರ ಅವತಾರಭೂತರಾದ ಶ್ರೀ ಮಧ್ವಾಚಾರ್ಯರನ್ನು ಯಾವಾಗಲೂ ಸೇವಿಸುತ್ತಾರೋ ಆ ಜನಗಳು ಶ್ರೀ ಮಧ್ವರಾಜರ ಆಜ್ಞೆಯಿಂದ ಮುಕ್ತಿಯನ್ನು ಹೊಂದಿಯೇ ಹೊಂದುತ್ತಾರೆ.

ಲೋಕಸ್ಯ ಸದ್ಗುರುಂ ಮಧ್ವಂ ಯೇ ದ್ವಿಷಂತಿ ನರಾಧಮಾಃ |
ತಾನ್ನರಾನ್ ಶ್ವಪದ್ಬಧ್ವಾ ಪ್ರಹರಂತಿ ವಿಚಕ್ಷಣಾಃ || ೯೪ ||

ಲೋಕದಲ್ಲಿರುವ ಸಜ್ಜನರಿಗೆ ಸದ್ಗುರುಗಳಾದ ಶ್ರೀ ಮಧ್ವಾಚಾರ್ಯರನ್ನು ಯಾವ ನರಾಧಮರು ದ್ವೇಷ ಮಾಡುತ್ತಾರೋ ಆ ಮನುಷ್ಯರನ್ನು ಕುದುರೆಯಂತೆ ಕಟ್ಟಿ ಜ್ಞಾನಿಗಳು ಹೊಡೆಯುತ್ತಾರೆ

ಯಂ ನರಂ ಮಧ್ವರಾಜಸ್ತು ನ ಗೃಹ್ಣಾತಿ ಹರಿಪ್ರಿಯಃ |
ತಂ ನರಂ ನೃಹರಿಸ್ಸಾಕ್ಷಾತ್ ನ ಚ ಗೃಹ್ಣಾತಿ ವಾಲಿವತ್ || ೯೫ ||

ಶ್ರೀಹರಿ ಪ್ರಿಯರಾದ, ರಾಜರಂತಿರುವ ಶ್ರೀ ಮಧ್ವಾಚಾರ್ಯರು ಯಾವ ಜನರನ್ನು ಸ್ವೀಕರಿಸುವುದಿಲ್ಲವೋ ಆ ಮನುಷ್ಯನನ್ನು ಸಾಕ್ಷಾತ್ ಶ್ರೀಮನ್ನಾರಾಯಣನು ವಾಲಿಯಂತೆ ಸ್ವೀಕರಿಸುವುದಿಲ್ಲ. (ಹನುಮಂತನನ್ನು ಆಶ್ರಯಿಸದ ವಾಲಿಯನ್ನು ಶ್ರೀ ರಾಮಚಂದ್ರದೇವರು ಹೇಗೆ ಸ್ವೀಕರಿಸಲಿಲ್ಲವೋ ಹಾಗೆ)

ಯಂ ನರಂ ಮಧ್ವರಾಜಸ್ತು ಸ್ವೀಕರೋತಿ ಯದಾ ಗುರುಃ |
ಸುಗ್ರೀವಮಿವ ತಂ ಶ್ರೀಶಃ ಸ್ವೀಕರೋತಿ ನ ಸಂಶಯಃ || ೯೬ ||

ಶ್ರೀ ಮಧ್ವಾಚಾರ್ಯ ಗುರುಗಳು ಯಾವ ನರನನ್ನು ಯಾವಾಗ ಸ್ವೀಕರಿಸುತ್ತಾರೆಯೋ ಆಗ ಆ ನರನನ್ನು ಸುಗ್ರೀವನಂತೆ ಲಕ್ಷ್ಮೀಪತಿ ಸ್ವೀಕರಿಸುತ್ತಾನೆ. (ಹನುಮಂತ ದೇವರನ್ನು ಮೊರೆ ಹೊಂದಿದ ಸುಗ್ರೀವನನ್ನು ಶ್ರೀ ರಾಮಚಂದ್ರ ದೇವರು ಸ್ವೀಕರಿಸಿ ವಾಲಿಯನ್ನು ಸಂಹಾರ ಮಾಡಿ ಕಪಿ ರಾಜ್ಯದಲ್ಲಿ ಸುಗ್ರೀವನಿಗೆ ಪಟ್ಟಾಭಿಷೇಕ ಮಾಡಿದ್ದಾರೆ)

ಉದಾಸ್ತೇ ತು ನರಂ ಯಂ ವೈ ಮಧ್ವಸ್ತ್ರಿಜಗತಾಂ ಗುರುಃ |
ಉದಾಸ್ತೇ ತು ಹರಿಸ್ತಂ ಹಿ ದುರ್ಜನಂ ಭಕ್ತವತ್ಸಲಃ || ೯೭ ||

ತ್ರೈಲೋಕಾಚಾರ್ಯರಾದ ಶ್ರೀ ಮಧ್ವಾಚಾರ್ಯರು ಯಾವ ಮನುಷ್ಯನನ್ನು ಉದಾಸೀನ ಮಾಡುತ್ತಾರೋ ಭಕ್ತರಲ್ಲಿ ವಾತ್ಸಲ್ಯವುಳ್ಳ ಶ್ರೀ ಹರಿಯು ಆ ದುರ್ಜನನನ್ನು ಉದಾಸೀನ ಮಾಡುತ್ತಾನೆ.

ಯೋ ದ್ವೇಷ್ಟಿ ನೃಹರಿಶ್ರೇಷ್ಠಂ ಶ್ರೀಮಧ್ವಂ ದುಷ್ಟ ಭೀಮಕಂ |
ಸಹರೇರ್ನಪ್ರಿಯೋ ಮಾಯೀ ದೇವಾದೀನಾಂ ನ ಸಂಶಯಃ || ೯೮ ||

ಯಾವನು ಶ್ರೀ ಭಗವಂತನನ್ನೂ ದುಷ್ಟರುಗಳಿಗೆ ಭಯಂಕರನಾದ ಶ್ರೀ ಮಧ್ವಾಚಾರ್ಯರನ್ನೂ ವಿರೋಧಿಸುತ್ತಾನೋ ಅವನು ಶ್ರೀ ಭಗವಂತನಿಗೂ ದೇವಾದಿಗಳಿಗೂ ಪ್ರಿಯನಾಗುವುದಿಲ್ಲ, ಇದಕ್ಕೆ ಸಂದೇಹವೇ ಇಲ್ಲ.

ಶೇಷಾದಿಭ್ಯೋ ವರಂ ಮಧ್ವಂ ಯೋ ವೇತ್ತಿ ಚ ನರಃಸದಾ |
ಸಮಧ್ಯಮೋ ನರೋ ಜ್ಞೇಯಃ ತಸ್ಯ ಮಿಶ್ರ ಫಲಂ ಭವೇತ್ || ೯೯ ||

ಯಾವ ಮನುಷ್ಯನು ಯಾವಾಗಲೂ ಮಧ್ವಾಚಾರ್ಯರು ಶೇಷಾದಿಗಳಿಂದ ಉತ್ತಮರೆಂದು ಮಾತ್ರ ತಿಳಿದುಕೊಳ್ಳುತ್ತಾನೋ ಅವನು ಮಧ್ಯ ಮನುಷ್ಯನು ಎಂದು ತಿಳಿದುಕೊಳ್ಳಬೇಕು. ಅವನಿಗೆ ಮಿಶ್ರಫಲವುಂಟಾಗುವುದು.

ಯೋ ಭಜೇತ್ ಸತತಂ ಭಕ್ತ್ಯಾ ಮಧ್ವರಾಜಂ ಚ ಸದ್ಗುರುಂ |
ಸ ಕೇಶವಪ್ರಿಯೋ ಭಕ್ತಃ ವೈಕುಂಠೇ ಮೋದತೇ ಸದಾ || ೧೦೦ ||

ಯಾರು ಯಾವಾಗಲೂ ಭಕ್ತಿಯಿಂದ ಸದ್ಗುರುಗಳಾದ ರಾಜಾ ಮಧ್ವಾಚಾರ್ಯರನ್ನು ಸೇವಿಸುತ್ತಾನೋ ಅವನು ಶ್ರೀ ಭಗವಂತನ ಪ್ರಿಯನಾದ ಭಕ್ತನು. ಅವನು ಸದಾ ವೈಕುಂಠ ಲೋಕದಲ್ಲಿ ಆನಂದ ಪಡುತ್ತಾನೆ.

ವ್ಯಾಸದೇವಸ್ಯ ಶಿಷ್ಯೋ ಹಿ ಮಧ್ವೋನಾಮ ಮಹಾಪ್ರಭುಃ |
ತಸ್ಮಾತ್ ಸ ಏವ ವಂದ್ಯೋ ಹಿ ಸರ್ವದಾ ಶುಭಮಿಚ್ಛತಾ || ೧೦೧ ||

ಶ್ರೀ ಮಧ್ವಾಚಾರ್ಯರೆಂಬ ಮಹಾಪ್ರಭು ವೇದವ್ಯಾಸದೇವರ ಶಿಷ್ಯರಷ್ಟೆ! ಆದ್ದರಿಂದಲೇ ಸರ್ವದಾ ಶುಭವನ್ನು ಇಚ್ಛಿಸತಕ್ಕವನಿಂದ ಅವರೇ ವಂದ್ಯರು.

ಮಧ್ವದ್ವೇಷೀ ಸಂಕರೋ ಹಿ ತಸ್ಮಿನ್ ವೈ ಸ್ನೇಹವಾನ್ನರ |
ತಸ್ಮಿನ್ ವೈ ಸ್ನೇಹವಾನ್ ಬಂಧು ಮಧ್ವದ್ವೇಷೀ ಸ ಏವಹಿ || ೧೦೨ ||

ಶ್ರೀ ಮಧ್ವಾಚಾರ್ಯರಿಗೆ ವಿರೋಧಿಯು ಸಂಕರನು. ಅವನಲ್ಲಿ ಯಾವ ನರನಿಗೆ ಸ್ನೇಹವುಂಟೋ ಆ ನರನಲ್ಲಿ ಸ್ನೇಹವುಳ್ಳ ಅವನ ಬಂಧುವೋ ಅವನೂ ಶ್ರೀ ಮಧ್ವಾಚಾರ್ಯರ ದ್ವೇಷಿಯೇ.

ಮಧ್ವಸ್ಯ ಲಾಂಛನಂ ಹಿತ್ವಾ ಸಂಕರಸ್ಯ ಹಿ ಲಾಂಛನಂ |
ಬಿಭ್ರಾಣೋ ವೈ ಸ ಮೂಢಾತ್ಮಾ ಮಧ್ವದ್ವೇಷೀ ಸ ನಿಶ್ಚಯಃ || ೧೦೩ ||

ಶ್ರೀ ಮಧ್ವಾಚಾರ್ಯರ ಚಿಹ್ನೆಗಳನ್ನು ಬಿಟ್ಟು ಸಂಕರಾಚಾರ್ಯರ ಚಿಹ್ನೆಯನ್ನು ಧರಿಸುವ ಮೂಢನಾದವನು ಶ್ರೀ ಮಧ್ವರ ದ್ವೇಷಿಯೆಂಬುದು ನಿಶ್ಚಯ.

ಗಂಗಾಯಾಃ ಸ್ನಾನಮಾತ್ರೇಣ ನ ತುಷ್ಯತಿ ಜನಾರ್ಧನಃ |
ತುಷ್ಟೋ ಭವತಿ ಲಕ್ಷ್ಮೀಶ ಶ್ರೀ ಮಧ್ವದ್ವೇಷಿ ದೂಷಣಾತ್ || ೧೦೪ ||

ಗಂಗೆಯಲ್ಲಿ ಸ್ನಾನ ಮಾಡುವುದರಿಂದಲೇ ಶ್ರೀಮನ್ನಾರಾಯಣನು ಸಂತೋಷಪಡುವುದಿಲ್ಲ. ಶ್ರೀ ಮಧ್ವಾಚಾರ್ಯರ ದ್ವೇಷಿಗಳನ್ನು ದೂಷಣ ಮಾಡುವುದರಿಂದ ಶ್ರೀ ಲಕ್ಷ್ಮೀಪತಿಯು ಸಂತುಷ್ಟನಾಗುತ್ತಾನೆ.

ಮಧ್ವೋಚ್ಛಿಷ್ಟಂ ಸದಾಭೋಜ್ಯಂ ಹರೇರಾಜ್ಞಾನುಸಾರತಃ |
ತಸ್ಮಾನ್ಮಹಾನುಭಾವಾಯ ದದ್ಯಾದನ್ನಂ ವಿಚಕ್ಷಣಃ || ೧೦೫ ||

ಶ್ರೀ ಮಧ್ವಾಚಾರ್ಯರ ಉಚ್ಛಿಷ್ಟವನ್ನು ಶ್ರೀಹರಿಯ ಆಜ್ಞಾನುಸಾರತಃ ಸದಾ ಊಟ ಮಾಡಬೇಕು. ಆದುದರಿಂದ ಜ್ಞಾನಿಯಾಗಿದ್ದ ಮನುಷ್ಯನು ಮಹಾನುಭಾವರಾದ ಶ್ರೀ ಮಧ್ವಾಚಾರ್ಯರಿಗೆ ಅನ್ನವನ್ನು ನೈವೇದ್ಯ ಮಾಡಬೇಕು.

ಸರ್ವ ಭೂತಾತ್ಮಭೂತಾಯ ಮಧ್ವಾಯಾಮಿತ ತೇಜಸೇ |
ದೇಯಂ ಶಾಂತಾಯ ಪೂರ್ಣಾಯ ದತ್ತಸ್ಯಾನಂತಮಿಚ್ಛತಾ || ೧೦೬ ||

ಸಕಲ ಪ್ರಾಣಿಗಳಿಗೂ ಸ್ವಾಮಿಯಾದವರೂ, ಅಪರಿಮಿತ ತೇಜಸ್ಸುಳ್ಳವರೂ, ಶಾಂತರೂ, ಗುಣಪೂರ್ಣರೂ ಆದ ಶ್ರೀ ಮಧ್ವಾಚಾರ್ಯರಿಗೆ ನೈವೇದ್ಯ (ಅನಂತವಾಗಬೇಕಾದರೆ, ನಾಶವಿಲ್ಲದ್ದಾಗಬೇಕಾದರೆ) ಮಾಡಬೇಕು.

ಮಧ್ವಸ್ಯ ದ್ವೇಷಿಣಂ ದೃಷ್ಟ್ವಾ ಕರಾಭ್ಯಾಂ ನಮ ಇತ್ಯಪಿ |
ಬ್ರುವಾಣಸ್ಯ ಕರೌಛಿತ್ವಾ ಸಿಂಧುಮಧ್ಯೇ ವಿನಿಕ್ಷಿಪೇತ್ || ೧೦೭ ||

ಶ್ರೀ ಮಧ್ವಾಚಾರ್ಯರ ದ್ವೇಷಿಯನ್ನು ನೋಡಿ ಕೈಗಳನ್ನು ಜೋಡಿಸಿ ನಮಃ ಎಂದು ಹೇಳಿದರೆ ಕೈಗಳನ್ನು ಛೇದಿಸಿ ಸಮುದ್ರ ಮಧ್ಯದಲ್ಲಿ ಹಾಕಬೇಕು.

ಅನ್ನಸ್ಯದಾನ ಮಾತ್ರೇಣ ನ ತುಷ್ಯತಿ ಜಗತ್ಪ್ರಭುಃ |
ತುಷ್ಟೋ ಭವತಿ ಸರ್ವೇಶಃ ಶ್ರೀ ಮಧ್ವ ದ್ವೇಷಿದೂಷಣಾತ್ || ೧೦೮ ||

ಅನ್ನದಾನ ಮಾಡುವುದರಿಂದ ಮಾತ್ರ ದೇವರು ತುಷ್ಟನಾಗುವುದಿಲ್ಲ. ಸರ್ವೇಶ್ವರರಾದ ಶ್ರೀ ಮಧ್ವಾಚಾರ್ಯರ ದ್ವೇಷಿಗಳನ್ನು ದೂಷಣ ಮಾಡುವುದರಿಂದ ಸರ್ವೇಶ್ವರನಾದ ಪರಮಾತ್ಮನು ಸಂತುಷ್ಟನಾಗುತ್ತಾನೆ.

ವೈಶ್ಯಾಲಯೇ ವಸೇತ್ ವಿಪ್ರೋ ಹಿಂಸಕಸ್ಯ ಗೃಹೇಪಿ ವಾ |
ನ ವಸೇತ್ ಮಧ್ವತತ್ವಜ್ಞಃ ಶ್ರೀ ಮಧ್ವ ದ್ವೇಷಿಸದ್ಮನಿ || ೧೦೯ ||

ವೈಶ್ಯಾ ಸ್ತ್ರೀಯರ ಮನೆಯಲ್ಲಿಯೋ ಘಾತುಕರ ಮನೆಯಲ್ಲಿಯೋ ಮಧ್ವತತ್ವವನ್ನು ತಿಳಿದ ಬ್ರಾಹ್ಮಣನು ವಾಸ ಮಾಡಬಹುದು. ಶ್ರೀ ಮಧ್ವ ದ್ವೇಷಿಗಳ ಮನೆಯಲ್ಲಿ ವಾಸಮಾಡಬಾರದು.

ಏತಚ್ಛಾಸ್ತ್ರಮನಾದೃತ್ಯ ತದ್ಗೃಹೇಷು ವಸೇದ್ಧಿ ಯಃ |
ಮಧ್ವದ್ವೇಷೀ ಸದಾಭೂತ್ವಾ ತಮೋ ವಿಶತಿ ಸಧ್ರುವಂ || ೧೧೦ ||

ಈ ಶಾಸ್ತ್ರವನ್ನು ಅನಾದರಿಸಿ ಶ್ರೀ ಮಧ್ವ ದ್ವೇಷಿಗಳ ಮನೆಯಲ್ಲಿ ಯಾರು ವಾಸ ಮಾಡುತ್ತಾನೋ ಅವನು ಶ್ರೀ ಮಧ್ವ ದ್ವೇಷಿಯಾಗಿ ನಿಶ್ಚಯವಾಗಿಯೂ ಅಂಧಂತಮಸ್ಸಿನಲ್ಲಿ ಪ್ರವೇಶಿಸುತ್ತಾನೆ.

ವಾಪೀಕೂಪ ತಟಾಕಾದಿ ಶ್ರೀಮಧ್ವದ್ವೇಷಿ ನಿರ್ಮಿತಂ |
ಜಲಾದಿ ತತ್ರ ನಗ್ರಾಹ್ಯಂ ನರಕಪ್ರಾಪ್ತಿ ಹೇತುತಃ || ೧೧೧ ||

ದೊಡ್ಡ ಬಾವಿ, ಚಿಕ್ಕ ಬಾವಿ. ಸರೋವರ ಮೊದಲಾದವುಗಳನ್ನು ಶ್ರೀಮಧ್ವ ದ್ವೇಷಿಗಳು ನಿರ್ಮಿಸಿದ್ದರೆ ಅದರಲ್ಲಿರುವ ನೀರನ್ನು ನರಕಪ್ರಾಪ್ತಿಗೆ ಹೇತುವಾದುದರಿಂದ

ತೆಗೆದುಕೊಳ್ಳಬಾರದು.

ಮಧ್ವಪ್ರಿಯೋ ಯದಾ ವಿಪ್ರೋ ಯದ್ಗೃಹಂ ಪ್ರವಿಶೇದ್ವಿಭೋ |
ತದ್ಗೃಹೇಷು ಸದಾ ಪ್ರಾಜ್ಞಃ ಕುರ್ಯಾತ್ ಸ್ವಸ್ತ್ಯಯನಂ ಸದಾ || ೧೧೩ ||

ಶ್ರೀ ಮಧ್ವಾಚಾರ್ಯರ ಪ್ರಿಯನು ಯಾವಾಗ ಯಾವ ಮನೆಯೊಳಗೆ ಪ್ರವೇಶಿಸುತ್ತಾನೋ ಆ ಮನೆಗಳಲ್ಲಿ ಸರ್ವಜ್ಞರಾದ ಮಧ್ವಾಚಾರ್ಯರು ಯಾವಾಗಲೂ ಮಂಗಳವನ್ನುಂಟುಮಾಡುವರು.

ಇತಿ ಶ್ರೀಮತ್ಕವಿಕುಲತಿಲಕತ್ರಿವಿಕ್ರಮಪಂಡಿತಾಚಾರ್ಯರಸುಪುತ್ರ
ಶ್ರೀಮನ್ನಾರಾಯಣಪಂಡಿತಾಚಾರ್ಯವಿರಚಿತಃ ಶ್ರೀ ಮಧ್ವಾಮೃತ ಮಹಾರ್ಣವಃ
ಸಂಪೂರ್ಣಃ

ಅನುವಾದಕರು : **ವಿದ್ವದ್ಭೂಷಣ ಆಲೆವೂರು ಸುಬ್ರಾಯಾಚಾರ್ಯ,**
ದ್ವೈತವೇದಾಂತ ಶಿರೋಮಣಿ
ಉಡುಪಿ ಶ್ರೀ ಕೃಷ್ಣ ಮಂದಿರ, ಮೈಸೂರು

ಪ್ರಕಾಶಕ ಸೇವಾಕರ್ತೃ : **ಕೆ. ಎಸ್. ಅಚ್ಯುತ ಬಲ್ಲಾಳ, ಮೈಸೂರು**

ಸುಧಾ ಪ್ರಿಂಟರ್ಸ್, ಮಧ್ವಾಚಾರ್ಯ ರಸ್ತೆ, ಮೈಸೂರು-೪